# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 Volume:02 • ಸಂಚಿಕೆ: 66 Issue: 66 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 05.09.2024 05.09.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2










## ಕೃಷಿ ಪಂಪ್‌ಸೆಟ್‌ಗೆ ಆಧಾರ್ ಜೋಡಣೆ, ರೈತರ ಆಕ್ರೋಶ

### ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಪ್ರತಿಭಟನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ನಂಬರ್ ಜೋಡಣೆ ಮೂಲಕ ಖಾಸಗೀಕರಣಗೊಳಿಸಿ ವಿದ್ಯುತ್ ಶುಲ್ಕ ವಿಧಿಸುವ ಸರ್ಕಾರದ ಯೋಜನೆ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಜೆಸ್ಕಾಂ ಎದುರು ಬುಧವಾರ ಪ್ರತಿಭಟನೆ ನಡೆಸಿತು.

ಸಂಘಟನೆಯ ತಾಲೂಕು ಅಧ್ಯಕ್ಷ ಸಣ್ಣಕ್ಕಿ ರುದ್ರಪ್ಪ ಮಾತನಾಡಿ, ಗಂಗಾಕಲ್ಯಾಣ ಯೋಜನೆ ಅಡಿಯಲ್ಲಿ ಬರುವಂತಹ ಕೃಷಿ ಕೊಳವೆಬಾವಿಗಳಿಗೆ ಟಿ.ಸಿ. ವಿದ್ಯುತ್‌ಕಂಬಗಳು ವೈರ್‌ಗಳು ಇತರೆ ಸಾಮಾಗ್ರಿಗಳನ್ನು ರೈತರು ತಮ್ಮ ಸ್ವಂತ ಖರ್ಚಿನಲ್ಲಿಯೇ ಬಾಡಿಗೆ ವಾಹನಗಳಲ್ಲಿ ಸಾಗಿಸುತ್ತಿದ್ದಾರೆ. ಸರ್ಕಾರ ಕೂಡಲೇ ರೈತರ ಆರ್ಥಿಕ ಹೊರೆ ತಪ್ಪಿಸಲು ಕೂಡಲೇ ವಾಹನ ಸೌಕರ್ಯ ಒದಗಿಸಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್‌ನಂಬರ್ ಜೋಡಣೆಯ >>3

## ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ 15 ಶಿಕ್ಷಕರು ಆಯ್ಕೆ

### ಸೆ.9 ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಪ್ರಧಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಶಾಲಾ ಶಿಕ್ಷಣ ಇಲಾಖೆ ನೀಡುವ 2024–25ನೇ ಸಾಲಿನ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗಳಿಗೆ ವಿಜಯನಗರ ಜಿಲ್ಲೆಯ ಕಿರಿಯ, ಹಿರಿಯ ಹಾಗೂ ಪ್ರೌಢಶಾಲಾ ವಿಭಾಗದ ತಲಾ ಐವರು ಆಯ್ಕೆಗೊಂಡಿದ್ದು, ಒಟ್ಟು 15 ಶಿಕ್ಷಕರು ಆಯ್ಕೆಯಾಗಿದ್ದಾರೆ. ಸೆ.9 ರಂದು ಬೆಳಿಗ್ಗೆ 10ಕ್ಕೆ ನಗರದ ಸಾಯಿಲೀಲಾ ರಂಗ ಮಂದಿರಲ್ಲಿ ನಡೆಯುವ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆಯಂದು ಆಯ್ಕೆಯಾದ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ವಿಜಯನಗರ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಎ.ಹನುಮಕ್ಕ ತಿಳಿಸಿದ್ದಾರೆ. 15 ಶಿಕ್ಷಕರ ಪೈಕಿ 7 ಶಿಕ್ಷಕಿಯರು, 8 ಶಿಕ್ಷಕರಿದ್ದಾರೆ. ಹರಪನಹಳ್ಳಿ ತಾಲೂಕಿನಿಂದ ಮೂವರು ಶಿಕ್ಷಕಿಯರು ಜಿಲ್ಲಾ ಮಟ್ಟದ ಉತ್ತಮ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

**ಹೊಸಪೇಟೆ:** ಗೌಸಿಯಾ ಬೇಗಂ.ಎಂ. (ಸ.ಉರ್ದು ಕಿ.ಪ್ರಾ.ಶಾಲೆ.ಪಿ.ಕೆ.ಹಳ್ಳಿ), ಎಂ.ಹನುಮವ್ವ (ಸ.ಹಿ.ಪ್ರಾ.ಶಾಲೆ, ವ್ಯಾಸನಕೆರೆ), ಸುಧಾಕರ.ಎ (ಬಾಲಕೀಯರ ಸ.ಪದವಿ ಪೂರ್ವ ಕಾಲೇಜ್(ಪ್ರೌ.ವಿ.) ಹೊಸಪೇಟೆ.), **ಹೂವಿನ ಹಡಗಲಿ:** ಜಯಪ್ಪ ಎಂ (ಸ.ಕಿ.ಪ್ರಾ.ಶಾಲೆ. ಬ್ಯಾಡರಗೇರೆ ಮಾಗಳ), ಎ.ಚಂದ್ರಪ್ಪ (ಸ.ಮಾ.ಹಿ.ಪ್ರಾ.ಶಾಲೆ. ಎ.ಕೆ.ಕಾಲೋನಿ ಹೊಳಲು), ಕೆ.ನಿಂಗಪ್ಪ (ಸ.ಪ್ರೌ.ಶಾಲೆ. ಮಾನ್ಯರ ಮಸಲವಾಡ), **ಹಗರಿಬೊಮ್ಮನಹಳ್ಳಿ:** ಹೆಚ್.ಸುರೇಶ (ಸ.ಕಿ.ಪ್ರಾ.ಶಾಲೆ ಸಕ್ರಿಹಳ್ಳಿ ), ಹಿರೇಮಠದ ಬಸಯ್ಯ (ಸ.ಹಿ.ಪ್ರಾ.ಶಾಲೆ ಬಾಚಿಗೊಂಡನಹಳ್ಳಿ) ಲಕ್ಷ್ಮೀ.ಎಸ್.ಬಿ. (ಸ.ಪ್ರೌ.ಶಾಲೆ. ಅಂಕಸಮುದ್ರ), **ಕೂಡ್ಲಿಗಿ:** ಟಿ.ತಿಪ್ಪೇಸ್ವಾಮಿ (ಸ.ಕಿ.ಪ್ರಾ.ಶಾಲೆ. ನುಂಕನಹಳ್ಳಿ), ಸೌಭಾಗ್ಯಲಕ್ಷ್ಮೀ(ಸ.ಹಿ.ಪ್ರಾ.ಶಾಲೆ.ಕೆಂಚಮಲ್ಲನಹಳ್ಳಿ)ಗೋಪಾಲನಾಯ್ಕ.ಟಿ. (ಕರ್ನಾಟಕ ಪಬ್ಲಿಕ್ ಶಾಲೆ (ಪ್ರೌ.ಶಾ.ವಿ.) ಗುಡೆಕೋಟೆ) **ಹರಪನಹಳ್ಳಿ:** ಬಿ.ಜಿ.ಭಾನು (ಉನ್ನತೀಕರಿಸಿದ ಸ.ಹಿ.ಪ್ರಾ.ಶಾಲೆ ಉಚ್ಚಂಗಿದುರ್ಗ) ಶ್ವೇತಾ ಜಿ. (ಸ.ಹಿ.ಪ್ರಾ.ಶಾಲೆ ಹಾರಕನಾಳು), ಪರ್ವೀನ್ ಬಾನು (ಸ.ಆದರ್ಶ ವಿದ್ಯಾಲಯ ಅನಂತನಹಳ್ಳಿ)

## ಕೇಸರಿ ಸಿಂಹದ ಹುಟ್ಟುಹಬ್ಬ ಪ್ರಾಣಿಗಳ ಮೇಲೆ ದಯೆ ಇರಲಿ

### ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

- ■ ಕರಪತ್ರ ಬಿಡುಗಡೆ
- ■ ಯುಪಿಐ ಐಡಿಗೆ ಚಾಲನೆ
- ■ ಶಾಸಕರಿಂದ ಪ್ರಾಣಿಗಳ ವೀಕ್ಷಣೆ

ಜಗಜ್ಯೋತಿ ಬಸವೇಶ್ವರರು ಹೇಳಿದ ವಚನದ ಸಾಲುಗಳನ್ನು ಅರ್ಥೈಸಿಕೊಳ್ಳಬೇಕು. ಪ್ರಾಣಿಗಳ ಮೇಲೆ ಪ್ರತಿಯೊಬ್ಬರು ದಯಾಗುಣವಿಟ್ಟುಕೊಳ್ಳಬೇಕು ಎಂದು ಶಾಸಕ ಹೆಚ್ ಆರ್ ಗವಿಯಪ್ಪ ಹೇಳಿದರು.

ತಾಲೂಕಿನ ಕಮಲಾಪುರದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಜಿಯಾಲಾಜಿಕಲ್‌ವತಿಯಿಂದ ಜಿಯಾಲಾಜಿಕಲ್ ಪಾರ್ಕನಲ್ಲಿ ಬುಧವಾರ ಆಯೋಜಿಸಿದ್ದ ಕೇಸರಿ ಗಂಡು ಸಿಂಹದ 9ನೇ ವರ್ಷದ ಹುಟ್ಟುಹಬ್ಬದ ಮಾತನಾಡಿದರು. ಪ್ರಾಣಿಗಳ ಸಂತತಿಯು ನಿರಂತರ >>3







## ಬೆಳಕಿನ ಹಾದಿ

# ಅಪ್ಪನೆಂಬ ಅದ್ಭುತ

■ ಜಯಶ್ರೀ.ಎಂ. ಕರ್ಜಗಿ. ಹುಬ್ಬಳ್ಳಿ

ಒಂದೂರಿನಲ್ಲಿ ಒಂದು ಚಿಕ್ಕ ಸಂಸಾರವಿತ್ತು. ಅಪ್ಪ, ಅಮ್ಮ ಮತ್ತು ಇಬ್ಬರು ಮಕ್ಕಳು. ದೊಡ್ಡವನು ಎಂ.ಬಿ.ಎ ಓದಿದ್ದ. ಮಗಳನ್ನು ಪಿ.ಯು.ಸಿ.ವರೆಗೆ ಮಾತ್ರ ಓದಿಸಿ ಮದುವೆ ಮಾಡಿಕೊಟ್ಟಿದ್ದರು. ಮಗಳು ಓದಿನಲ್ಲಿ ಮುಂದಿದ್ದರೂ ಗಂಡನ ಮನೆಗೆ ಹೋಗುವವಳಿಗೆ ದೊಡ್ಡ ಓದು ಯಾಕೆ ಎಂದು ಪಿ.ಯು.ಸಿ.ವರೆಗೆ ಮಾತ್ರ ಓದಿಸಿದ್ದರು.



ಮಗ ಎಂ.ಬಿ.ಎ. ಮಾಡಿ ಒಂದು ಖಾಸಗೀ ಮಾರ್ಕೆಟಿಂಗ್ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದ. ಬರುವ ಸಂಬಳದಿಂದ ಜೀವನ ಕುಂಟುತ್ತಾ ಸಾಗಿತ್ತು. ತಂದೆಗೆ ವಯಸ್ಸಾಗುತ್ತಿದ್ದಂತೆ ದೇಹದಲ್ಲಿ ಶಕ್ತಿ ಕುಂದುತ್ತಾ ಬಂದಿತು. ಹೊರಗಡೆ ಹೋಗಿ ದುಡಿಯುವ ಚೈತನ್ಯ ಇಲ್ಲದಾಗಿತ್ತು. ಸಂಪೂರ್ಣವಾಗಿ ಮಗನ ಸಂಬಳದ ಮೇಲೆ ಕುಟುಂಬದ ನಿರ್ವಹಣೆ ನಿಂತಿತ್ತು.

ಬರುಬರುತ್ತಾ ಮಗನ ವರ್ತನೆಯಲ್ಲಿ ಬದಲಾವಣೆಗಳು ಕಾಣತೊಡಗಿದವು. ಮನೆ ನಿರ್ವಹಣೆಗೆ ನೀಡುತ್ತಿದ್ದ ಹಣದಲ್ಲಿ ಕಡಿತವಾಯಿತು. ಮೊದಮೊದಲು ಕೆಲಸ ಮುಗಿದ ಕೂಡಲೇ ಮನೆ ಸೇರುತ್ತಿದ್ದ ಮಗ, ಇತ್ತೀಚಿಗೆ ತಡರಾತ್ರಿ ಮನೆಗೆ ಬರಲು ಪ್ರಾರಂಭಿಸಿದ. ಕೇಳಿದರೆ ತಂದೆ-ತಾಯಿಯ ಮೇಲೆ ರೇಗಾಡತೊಡಗಿದ. ಬರುಬರುತ್ತಾ ತಂದೆಗೆ ಮಗನದೇ ಚಿಂತೆಯಾಯಿತು. ಇದರಿಂದ ತಂದೆ ಕಾಯಿಲೆಗೆ ಬಿದ್ದ.

ತಾಯಿಯ ಆರೈಕೆಯಲ್ಲಿ ನರಳುತ್ತಾ ದಿನ ದೂಡತೊಡಗಿದ. ಆದರೆ ಸಾವು ಕೊನೆಗೂ ತಂದೆಯನ್ನು ಕರೆದೊಯ್ದಿತು. ತಂದೆಯನ್ನು ಕಳೆದುಕೊಂಡ ಮಗನಿಗೆ ಆಕಾಶವೇ ಕಳಚಿಬಿದ್ದಂತೆ ಆಯಿತು. ಬಂಧು-ಬಾಧವರೆಲ್ಲ ಕೊಂಕು ಮಾತುಗಳನ್ನಾಡಿದರು. ಆಪ್ತರು ಮತ್ತು ಸ್ನೇಹಿತರು ಬದುಕಿನ ದಾರಿಯ ಬಗ್ಗೆ ತಿಳಿಸಿದರು. ಈಗೀಗ ಅವನಿಗೆ ಎಲ್ಲವೂ ಅರಿವಾಗತೊಡಗಿತ್ತು. ಅಪ್ಪನೆಂದರೆ ಅದ್ಭುತ ಹೇಗೆ ಎಂಬುದು ತಿಳಿಯತೊಗಿತ್ತು.

ಪ್ರತಿಯೊಬ್ಬರ ಜೀವನದಲ್ಲಿ ಅಪ್ಪನ ಪಾತ್ರ ತುಂಬಾ ದೊಡ್ಡದ್ದು. ಅಪ್ಪ ತಂದು ಹಾಕಿದರೆ ಅಮ್ಮ ಬೇಯಿಸಿ ಹಾಖುತ್ತಾಳೆ. ಅಮ್ಮ ಒಂಭತ್ತು ತಿಂಗಳು ತನ್ನ ಗರ್ಭದಲ್ಲಿ ಹೊತ್ತು ಬೆಳೆಸುತ್ತಾಳೆ. ಆದರೆ ಅಪ್ಪ ಅವನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಿ ಅವನಿಗೆ ವಿದ್ಯಾಭ್ಯಾಸ ಕೊಟ್ಟು, ಅವನ ಬೇಕು-ಬೇಡಿಕೆಗಳನ್ನು ಈಡೇರಿಸಿ ಸ್ವಂತ ಕಾಲ ಮೇಲೆ ನಿಲ್ಲುವಂತೆ ಮಾಡುತ್ತಾನೆ. ತನಗೆ ಎಷ್ಟೇ ಕಷ್ಟ ಇದ್ದರೂ ಮಕ್ಕಳಿಗೆ ಇಲ್ಲ ಎನ್ನದೇ ಅವರ ಆಸೆ ಪೂರೈಸುತ್ತಾನೆ. ಹಾಗಾಗಿ ಅಪ್ಪ ಎಂದರೆ ಅದ್ಭುತ, ಅಚ್ಚರಿಗಳ ಆಗರ.

ಒಂದು ವೇಳೆ ಅಪ್ಪ ಏನಾದರೂ ಕೇಳಿದರೆ ಇಲ್ಲ ಎನ್ನದೇ ಅವರ ಆಸೆ ಪೂರೈಸಿ. ಅಪ್ಪನಿಗೆ ಗೌರವ, ಮರ್ಯಾದೆ ಕೊಟ್ಟು ಮಾತನಾಡಿ. ಸಾಕಿ ಬೆಳೆಸಿದ ಅಪ್ಪನ ಮುಂದೆ ಏರುಧ್ವನಿಯಲ್ಲಿ ಮಾತನಾಡಬೇಡಿ.

ಅಪ್ಪನನ್ನು ನಿಮ್ಮ ಸ್ನೇಹಿತನ ಹಾಗೆ ಕಾಣಿರಿ. ಅಪ್ಪ ಏನಾದರೂ ಬುದ್ಧಿಮಾತು ಹೇಳಿದರೆ ತಾಳ್ಮೆಯಿಂದ ಕೇಳಿಸಿಕೊಳ್ಳಿ. ಏಕೆಂದರೆ ಅಪ್ಪನ ಬದುಕಿನ ಅನುಭವಗಳು ನಿಮ್ಮ ಬದುಕಿಗೆ ಒಳ್ಳೆಯ ಪಾಠಗಳಾಗಿವೆ. ತಾಳ್ಮೆಯಿಂದ ಅಪ್ಪನ ಮಾತುಗಳನ್ನು ಕೇಳಿಸಿಕೊಂಡರೆ ನಿಮ್ಮ ಗೌರವವೂ ಹೆಚ್ಚಾಗುತ್ತದೆ. ಆದರೆ ಇತ್ತೀಚಿನ ಮಕ್ಕಳಲ್ಲಿ ತಾಳ್ಮೆ ಕಡಿಮೆಯಾಗುತ್ತಿದೆ. 'ತಾಳಿದವನು ಬಾಳಿಯಾನು' ಎಂಬ ಗಾದೆ ಮಾತು ನಿಜಕ್ಕೂ ಅರ್ಥಗರ್ಭಿತ ಎಂಬುದನ್ನು ತಿಳಿಯಿರಿ. ತಂದೆ-ತಾಯಿಗೆ ಗೌರವ ಕೊಡದೇ ಇದ್ದರೆ ನಿಮ್ಮ ಓದು, ಪದವಿ, ವೃತ್ತಿಗಳೆಲ್ಲವೂ ನಿರರ್ಥಕ. ನಿಮ್ಮ ವಿದ್ಯಾಭ್ಯಾಸ ನೀರಿನಲ್ಲಿ ಹೋಮ ಮಾಡಿದಂತೆ ನಿಷ್ಪ್ರಯೋಜಕವಾಗುತ್ತದೆ. ಸಂಸ್ಕಾರ ಇಲ್ಲದ ಜೀವನ ವ್ಯರ್ಥ. ವಯಸ್ಸಾದ ತಂದೆ-ತಾಯಿಗಳನ್ನು ಮಕ್ಕಳಂತೆ ನೋಡಿಕೊಂಡರೆ, ಮುಂದೆ ನಇಮ್ಮ ಮಕ್ಕಳು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಇಲ್ಲದಿದ್ದರೆ ನಿಮಗೆ ವೃದ್ಧಾಶ್ರಮ, ಅನಾಥಾಶ್ರಮಗಳು ಗತಿಯಾಗಬಹುದು.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**

# ಶಿಕ್ಷಕರ ವೃತ್ತಿ ಪ್ರೇರಕ ಶಕ್ತಿ

ಅದೊಂದು ಕಾಲವಿತ್ತು ನಮಗೆ ಕಲಿಸಿದ ಶಿಕ್ಷಕರು ಎಲ್ಲೇ ಕಂಡರೂ ಹತ್ತಿರ ಹೋಗಿ ಗೌರವ ಮತ್ತು ಪ್ರೀತಿ ತುಂಬಿದ ಮನಸ್ಸಿನಿಂದ ಮಾತನಾಡಿಸುತ್ತಿದ್ದೆವು. ಕೆಲವೊಮ್ಮೆ ಹೃದಯ ಎಷ್ಟು ತುಂಬಿ ಬರುತ್ತಿದ್ದೆಂದರೆ ಮಾತುಗಳು ದನಿಯಾಗದೆ ಹಾಗೆ ಉಳಿದುಬಿಡುತ್ತಿದ್ದವು. ಕಣ್ಣುಗಳಲ್ಲಿ ಅಪಾರವಾದ ಗುರುಪ್ರೇಮ ಮೌನವಾಗಿ ಅಭಿವ್ಯಕ್ತಗೊಳ್ಳುತ್ತಿತ್ತು. ಇಂತಹ ಗಾಢವಾದ ಬಾಂಧವ್ಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಏರ್ಪಡುತ್ತಿದ್ದುದು ಹೇಗೆ ಎಂಬ ಪ್ರಶ್ನೆ ಕಾಡುತ್ತದೆ. ಅಂದು ಶಿಕ್ಷಕರು ಕೇವಲ ಪಾಠ ಮಾಡುವ, ನೋಟ್ಸ್ ಕೊಡುವ, ಅಂಕಗಳಿಗಾಗಿ ಒತ್ತಡ ಹೇರುವವರಾಗಿರಲಿಲ್ಲ.



ಭವ್ಯ ಟಿ.ಎಸ್.
ಕನ್ನಡ ಶಿಕ್ಷಕರು, ಹೊಸನಗರ

Scan For Digital Colourful
HAMPI TIMES E-paper

ಪ್ರತಿ ವಿದ್ಯಾರ್ಥಿಯನ್ನೂ ತಮ್ಮ ಮನೆಯ ಮಕ್ಕಳೆಂಬಂತೆ ಪ್ರೀತಿಯಿಂದ ಕಾಣುತ್ತಿದ್ದರು. ಮಗುವಿನ ಗುಣಗಳೊಂದಿಗೆ ಲೋಪಗಳನ್ನೂ ಸಹಿಸಿ ಕೊಳ್ಳುವ ಮಾತೃ ಹೃದಯಿಗಳಾಗಿದ್ದರು. ನಾವು ನಿತ್ಯ ವ್ಯವಹರಿಸುತ್ತಿರುವುದು ಯಂತ್ರಗಳೊಂದಿಗಲ್ಲ ಬದಲಾಗಿ ಈಗ ತಾನೇ ಅರಳುತ್ತಿರುವ ಕೋಮಲ ಮನಗಳೊಂದಿಗೆ ಎಂಬ ಅರಿವು ಹೊಂದಿದ್ದರು. ಪ್ರತಿ ಮಗುವಿನ ಪ್ರತಿಭೆ ಮತ್ತು ವಿಶೇಷ ಸಾಮರ್ಥ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದರು. ಮಗು ತಪ್ಪು ಮಾಡಿದಾಗ ತಾಳ್ಮೆ ಕಳೆದುಕೊಳ್ಳದೆ ಆಪ್ತ ಸಮಾಲೋಚಕರಾಗಿ ತಿದ್ದುವ ಪ್ರಯತ್ನ ಮಾಡುತ್ತಿದ್ದರು. ನನ್ನ ಮತ್ತು ನನ್ನ ಗುರುಗಳ ನಡುವಿನ ಬಾಂಧವ್ಯದ ಬಗ್ಗೆ ಕೆಲವು ಅನುಭವಗಳು ಹೀಗಿವೆ...

ನಾನು ನಮ್ಮ ಊರಿನ ಸರ್ಕಾರಿ ಪ್ರಾಥಮಿಕ ಶಾಲೆಯ ನಾಲ್ಕನೇ ತರಗತಿಯಲ್ಲಿ ಓದುತ್ತಿರುವಾಗ ನಮ್ಮ ಶಾಲೆಗೆ ಶಿಕ್ಷಕಿಯಾಗಿ ಬಂದವರು ಶ್ರೀಮತಿ ಗೀತಾ ದತ್ತಾತ್ರೇಯ ಮೇಡಂ. ಇವರು ನನ್ನ ವ್ಯಕ್ತಿತ್ವದ ಬೆಳವಣಿಗೆಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿದರು. ಇವರಿಂದ ನಾನು ಕನ್ನಡ ಮತ್ತು ಹಿಂದಿ ಭಾಷೆಗಳನ್ನು ಸುಂದರವಾಗಿ ಬರೆಯುವುದು ಮತ್ತು ಮಾತನಾಡುವುದನ್ನು ಕಲಿತೆ. ವೇದಿಕೆ ಎಂದರೆ ಮಾರು ದೂರ ಓಡುತ್ತಿದ್ದ ನನಗೆ ಹಾಡು, ಭಾಷಣ, ನಾಟಕ, ನೃತ್ಯ ಹೀಗೆ ಹಲವು ಚಟುವಟಿಕೆ ಗಳಲ್ಲಿ ಸಕ್ರಿಯ ವಾಗಿ ಭಾಗ ವಹಿಸಲು ಆತ್ಮ ವಿಶ್ವಾಸ ತುಂಬಿದರು.

ಪಠ್ಯದಿಂದ ಹೊರಗಿನ ಒಂದ ಸುಂದರ ಲೋಕ ಗೀತಾ ಮೇಡಂ ಅವರಿಂದ ನನ್ನೊಳಗೆ ಅನಾವರಣ ಗೊಂಡಿತು.

ಇನ್ನು ನಾನು ಪ್ರೌಢಶಾಲೆಗೆ ಬಂದಾಗ ನನ್ನ ಕನ್ನಡ ಗುರುಗಳಾಗಿದ್ದವರು ಎಂ. ಶಿವರಾಂ ಸರ್. ಪಂಪ, ರನ್ನ, ಶಿವಕೋಟ್ಯಾಚಾರ್ಯರನ್ನು ಅಚ್ಚಳಿಯದಂತೆ ಮನ ದೊಳಗೆ ಮೂಡಿಸಿದ ಅವರ ಭಾಷಾ ಪ್ರಭುತ್ವ ಇಂದು ನಾನು ಕನ್ನಡ ಶಿಕ್ಷಕಿಯಾಗುವುದಕ್ಕೆ ಮೂಲ ಪ್ರೇರಣೆ. ಪಿ.ಯು.ಸಿ. ಮತ್ತು ಪದವಿ ಶಿಕ್ಷಣ ಪಡೆಯುವಾಗ ನನ್ನೆಲ್ಲಾ ಗುರುಗಳು ನನಗೆ ನೀಡುತ್ತಿದ್ದ ಆಪ್ತ ಸಲಹೆಗಳು ನನ್ನ ಮುಂದಿನ ಜೀವನ ಮತ್ತು ವೃತ್ತಿ ಬದುಕಿಗೆ ಇಂದಿಗೂ ದಾರಿದೀಪಗಳಾಗಿವೆ. ನಿನ್ನಿಂದ ಇದು ಸಾಧ್ಯ ಎಂದು ಅವರು ಬೆನ್ನು ತಟ್ಟಿದ್ದು ನನ್ನ ಯಶಸ್ಸಿಗೆ ಮೂಲಕಾರಣವಾಯಿತು. ಅದರಿಂದ ತಿಳಿಯುವುದೇನೆಂದರೆ ಶಿಕ್ಷಕ ಎನ್ನುವುದು ಬರೀ ಒಂದು ವೃತ್ತಿಯಷ್ಟೇ ಅಲ್ಲ.ಅದೊಂದು ಪ್ರೇರಕ ಶಕ್ತಿ. ಡಾ. ಎಸ್. ರಾಧಾಕೃಷ್ಣನ್ ಅವರ ಮಾತಿನಂತೆ" ಶಿಕ್ಷಣ ಜೀವನದ ಅವಿಭಾಜ್ಯ ಅಂಗ.ಅದು ಮಾನವನನ್ನು ಪರಿಪೂರ್ಣತೆ ಮತ್ತು ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ.




ಶಿಕ್ಷಕರು ಪಾಠಗಳನ್ನು ಯಾಂತ್ರಿಕವಾಗಿ ವಿದ್ಯಾರ್ಥಿಗಳಿಗೆ ತಲುಪಿಸುವುದಾದರೆ ನಮಗೂ ಗಣಕ ಯಂತ್ರಗಳಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಪಠ್ಯದಾಚೆಗಿನ ವಿಶಾಲ ಬದುಕನ್ನು ಪ್ರೀತಿಯಿಂದ ಸ್ವೀಕರಿಸುವ, ಎಲ್ಲರೊಳಗೊಂದಾಗುವ ಮುಕ್ತ ಮನಸ್ಸನ್ನು ರೂಪಿಸುವಂತಾಗಬೇಕು. ಸೋತರೂ, ಎಡವಿದರೂ ಜೀವನವನ್ನು ಸಹ್ಯಗೊಳಿಸಿಕೊಳ್ಳುವ ಅಗಾಧ ಜೀವನೋತ್ಸಾಹವನ್ನು ಬಿತ್ತಿ ಬೆಳೆಯಬೇಕು. ಆಗ ಮಾತ್ರ ಶಿಕ್ಷಕರ ಸ್ಥಾನ ಶ್ರೇಷ್ಠತೆಯತ್ತ ಸಾಗಲು ಸಾಧ್ಯ.

# ಶಿಕ್ಷಕರಲ್ಲಿ ನಾಯಕತ್ವ ಗುಣಗಳ ಅವಶ್ಯಕತೆ

ಶಿಕ್ಷಕರೆಲ್ಲರೂ ನಾಯಕರೇ ತಮ್ಮ ವಿದ್ಯಾರ್ಥಿಗಳನ್ನು ವಿಜಯಶೀಲರಾಗಿ ಮುನ್ನಡೆಸುವ ಸಮೂಹ ಸಾರಥಿಗಳು, ನಿರತರು. ತಮ್ಮ ನಾಯಕತ್ವದಲ್ಲಿ ಎಷ್ಟೋ ಮಂದಿ ನಾಯಕರನ್ನು ತಯಾರು ಮಾಡುವ ಮಾನವತಾಮೂರ್ತಿಗಳು. ನಾಯಕತ್ವ ಲಕ್ಷಣಗಳುವುಳ್ಳ ಶಿಕ್ಷಕರ ಬಳಿ ವಿದ್ಯೆ ಕಲಿತ ವಿದ್ಯಾರ್ಥಿಗಳು ದೇಶಕ್ಕೆ ಕವಚವಾಗಿ ಮಾರ್ಪಾಡಾಗಿದ್ದಾರೆ. ವೃತ್ತಿ ಧರ್ಮಕ್ಕೆ ನ್ಯಾಯ ಒದಗಿಸಬೇಕಾದರೆ ಶಿಕ್ಷಕರು ನಾಯಕತ್ವ ಗುಣಗಳನ್ನು ಅಳವಡಿಸಿಕೊಳ್ಳಬೇಕು.

ನಾಯಕತ್ವ ಗುಣ ಹುಟ್ಟಿನಿಂದ ಬಂದಿದ್ದಲ್ಲ. ತಂದೆ-ತಾಯಿ, ಗುರು ಹಿರಿಯರು, ಪರಿಸರ, ಸಮಾಜದ ಪ್ರಭಾವದಿಂದ ನಾಯಕರಾಗುತ್ತಾರೆ. ನಾಯಕತ್ವ ಗುಣದಿಂದ, ಒಳ್ಳೆಯ ಸಂಭಾಷಣೆ, ನಡೆ-ನುಡಿಯಿಂದ ಆದರ್ಶ ಮತ್ತು ಮಾದರಿ ವ್ಯಕ್ತಿತ್ವದಿಂದ ಉತ್ತಮ ನಾಯಕರಾಗಿರುತ್ತಾರೆ. ತರಗತಿಯಲ್ಲಿ ಅವಶ್ಯ ಚಿತ್ರಗಳನ್ನು ತೋರಿಸುವುದು,



ಹೆಚ್.ಮಲ್ಲಿಕಾರ್ಜುನ
ಕನ್ನಡ ಉಪನ್ಯಾಸಕರು, ಹರಪನಹಳ್ಳಿ.

Scan For Digital Colourful
HAMPI TIMES E-paper

ಸಮಕಾಲಿನ ವಾರ್ತೆ ತಿಳಿಸುವುದು, ಸ್ಲೈಡ್‌ಗಳು ಮತ್ತು ಮ್ಯಾಪ್, ಉದಹರಣೆ ಕೊಡುವುದು, ಕಥೆ ಹೇಳುವುದು, ಕ್ರೀಡೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿ ಪ್ರೇರೇಪಿಸುತ್ತಾ ಪರಿಣಾಮ ಕಾರಿ ಬೋಧನೆ ಯಿಂದ ಪಾಠ ಮಾಡುತ್ತಾನೆ. ನಾಯಕತ್ವದಲ್ಲಿ ಓದಿ ತಿಳಿಯುವ ಪಾಠಗಳಿಗಿಂತ ನೋಡಿ ಕಲಿಯುವ ಪಾಠಗಳೇ ಹೆಚ್ಚು.

**"ಶಿಕ್ಷಕರು ಹಸುವಿನಂತೆ ಇರಬೇಕು ಹಸು ಕಸ ಮುಸುರಿ ತಿಂದು ಹಾಲನ್ನೇ ಕೊಡುತ್ತದೆ."**

ಇಂತಹ ಶಿಕ್ಷಕರೇ ಉತ್ತಮ ನಾಯಕತ್ವವುಳ್ಳವರು. ಪ್ರಪಂಚದಲ್ಲಿ ಕೆಲವರು ನಾಯಕರು ಮಾತ್ರ ಇರುತ್ತಾರೆ. ಉಳಿದವರೆಲ್ಲಾ ಅವರ ಅನುಯಾಯಿಗಳಾಗಿ ಅನುಸರಿಸುತ್ತಾರೆ. ಆದರೆ ಪ್ರತಿಯೊಬ್ಬ ಶಿಕ್ಷಕನಲ್ಲಿಯೂ ನಾಯಕತ್ವ ಗುಣವಿರುತ್ತದೆ. ನಾಯಕತ್ವ ಗುಣವುಳ್ಳ ಉತ್ತಮ ಶಿಕ್ಷಕರು ಕೆಲಸವನ್ನು ಹೇಳದೇ ತಾನೇ ಮಾಡುತ್ತಾ ಇತರರು ಮಾಡುವಂತೆ ಪ್ರೇರೇಪಿಸುತ್ತಾರೆ, ಸ್ಫೂರ್ತಿದಾಯಕರಾಗಿರುತ್ತಾರೆ. ಶಿಕ್ಷಕನಲ್ಲಿ ನಾಯಕತ್ವ ಗುಣ ಇಲ್ಲದಿದ್ದರೆ ವೃತ್ತಿಯಲ್ಲಿ ಯಶಸ್ಸು ಕಾಣಲಾರ. ತರಗತಿಯಲ್ಲಿ ತುಂಬಾ ಚೆನ್ನಾಗಿ ಪಾಠ ಮಾಡುವವರು ಬಾಹ್ಯ ಪ್ರಪಂಚದಲ್ಲಿ ಉತ್ತಮ ನಡೆ-ನುಡಿ, ಚಾರಿತ್ರ್ಯ ಇಲ್ಲದಿದ್ದರೆ ಅಂತವರನ್ನು ಉತ್ತಮ ಶಿಕ್ಷಕ ಎನ್ನಲಾಗದು. ಕೆಲವರು ತರಗತಿಯಲ್ಲಿ ತುಂಬಾ ಚೆನ್ನಾಗಿ ಪಾಠ ಮಾಡುತ್ತಾರೆ. ಬಾಹ್ಯ ಪ್ರಪಂಚದ ಜ್ಞಾನದ ಅರಿವಿರುವುದಿಲ್ಲ ಮತ್ತು ನಾಯಕತ್ವ ಗುಣವಿರುವುದಿಲ್ಲ. ಅಂತವರನ್ನು ಉತ್ತಮ ಶಿಕ್ಷಕ ಎನ್ನಲಾಗದು.

**ಅಶಕ್ತ ಶಿಕ್ಷಕ ದೂರುತ್ತಾನೆ**
**ಸಾಮಾನ್ಯ ಶಿಕ್ಷಕ ವಿವರಿಸುತ್ತಾನೆ**
**ಉತ್ತಮ ಶಿಕ್ಷಕ ಬೋಧಿಸುತ್ತಾನೆ**
**ಮಹಾ ಶಿಕ್ಷಕ(ಗುರು) ಸ್ಫೂರ್ತಿಗೊಳಿಸುತ್ತಾನೆ.**

"ಗುರು ದೊಡ್ಡ ಹೆಸರು ನಾವು ಸಂಬಳದ ಉಪಧ್ಯಾಯರು" ಬಿ.ಎಂ.ಶ್ರೀಯವರ ಹೇಳಿಕೆಯಂತೆ ಗುರುವಿನ ಸ್ಥಾನ ದೊಡ್ಡದು. ಆದರೆ ಸಂಬಳಕ್ಕಾಗಿ ಕೆಲಸ ಮಾಡುವವರು ಅನೇಕರಿದ್ದಾರೆ. ಸಂಬಳ ಎಷ್ಟೇ ಸಿಕ್ಕರೂ ತೃಪ್ತಿ ಇಲ್ಲ. ಸಂತೃಪ್ತಿಯ ಜೀವನವೇ ಶಿಕ್ಷಕರ ವೃತಿ. ಡಾಕ್ಟರ್ ಸರ್ವೆಪಲ್ಲಿ ರಾಧಕೃಷ್ಣನ್ ಸಾಮಾನ್ಯ ಶಿಕ್ಷಕನಾಗಿ ಉತ್ತಮ ನಾಯಕತ್ವ ಗುಣ ಹೊಂದಿದ್ದರಿಂದ ಉಪ ರಾಷ್ಟ್ರಪತಿಯಾಗಿ, ರಾಷ್ಟ್ರಪತಿಯಾಗಿ ಪ್ರಜೆಗಳ ಅಭಿಮಾನಗಳಿಸಿದ ನಾಯಕರಾದರು. ಶಿಕ್ಷಕರು ನೀಡುವ ಉತ್ತಮ ಬೋಧನೆ, ಪ್ರೇರಣೆಯಿಂದ ಕೆಲವೇ ವಿದ್ಯಾರ್ಥಿಗಳು ಮಾತ್ರ ನಾಯಕತ್ವ ಗುಣಗಳನ್ನು ರೂಡಿಸಿಕೊಳ್ಳುತ್ತಾರೆ. ರಾಜಕಾರಣಿ ಅಥವಾ ಒಬ್ಬ ಅಧಿಕಾರಿ ಅಧಿಕಾರದಲ್ಲಿರುವವರೆಗೆ ಮಾತ್ರ ಗೌರವಕ್ಕೊಳಗಾಗುತ್ತಾನೆ. ಉತ್ತಮ ಶಿಕ್ಷಕನಿಗೆ ಎಲ್ಲೆಡೆಯೂ, ಯಾವಾಗಲೂ ಗೌರವವಿದೆ. ಗುರು ಜ್ಯೋತಿಯಂತವನು. ಒಂದು ಜ್ಯೋತಿಯಿಂದ ಎಷ್ಟೋ ಜ್ಯೋತಿಗಳನ್ನು ಬೆಳಗಿಸಬಹುದು. ಶಿಕ್ಷಕ ಚೆನ್ನಾಗಿ ಓದು ಎಂದರೆ ನಾಯಕತ್ವ ಗುಣವುಳ್ಳ ಉತ್ತಮ ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರೇರಣೆಯಿಂದ "ನನಗೆ ಗೊತ್ತು ನೀನು ಚೆನ್ನಾಗಿ ಓದುತ್ತಿಯಾ" ಎಂದು. ವಿದ್ಯಾರ್ಥಿಗಳನ್ನು ಆತ್ಮ ವಿಶ್ವಾಸಿಗಳನ್ನಾಗಿ ಮಾಡುತ್ತಾ ಅವರ ಭವಿಷ್ಯಕ್ಕೆ ಬುನಾದಿ ಹಾಕುತ್ತಾನೆ.

ಶಿಕ್ಷಕನಲ್ಲಿರಬೇಕಾದ ನಾಯಕತ್ವದ ಗುಣಗಳೆಂದರೆ, ಎಲ್ಲಾ ಜ್ಞಾನವನ್ನು ಹೊಂದಿರುವವನು, ಆಕರ್ಷಕ ವ್ಯಕ್ತಿತ್ವ, ಆದರ್ಶ ಮೌಲ್ಯ, ಚಾರಿತ್ರ್ಯ, ಮಾದರಿಯಾಗಿರುವವನು ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವವನು, ಛಲ, ಗುರಿ, ಮಂದಹಾಸ, ಸಮಯ ಪ್ರಜ್ಞೆ, ತ್ಯಾಗ, ಪವಿತ್ರ ಜೀವನ ಮುಂತಾದ ಅನೇಕ ನಾಯಕತ್ವ ಗುಣಗಳನ್ನು ಹೊಂದಿರುವವನೇ ಉತ್ತಮ ಶಿಕ್ಷಕ.

ಬಾಲಗಂಗಾಧರ ತಿಲಕ್‌ರನ್ನೊಮ್ಮೆ ವರದಿಗಾರರು ಸಂದರ್ಶನ ಮಾಡಿ ಕೇಳಿದರು. ವರದಿಗಾರ: "ಸ್ವಾಮಿ ! ತಾವು ಸ್ವಾತಂತ್ರಕ್ಕಾಗಿ ಬಹಳ ಶ್ರಮವಹಿಸುತ್ತಿರುವಿರಲ್ಲವೇ! ಸ್ವತಂತ್ರ ಬಂದ ನಂತರ ಮಂತ್ರಿಪದವಿ ಪ್ರಧಾನ ಮಂತ್ರಿ ಪದವಿ ಕೈಗೊಳ್ಳುವಿರಾ? ಬಾಲಗಂಗಾಧರ. ತಿಲಕ್ : "ನಾನೊಬ್ಬನೇ ಮಂತ್ರಿ ಪದವಿ ಸ್ವೀಕರಿಸಿದರೆ ಪ್ರಯೋಜನವೇನು? ಅನೇಕ ಮಂದಿ ಮಂತ್ರಿಗಳನ್ನು, ಪ್ರಧಾನಮಂತ್ರಿಗಳನ್ನು ತಯಾರು ಮಾಡಬಲ್ಲ ಶಿಕ್ಷಕನಾಗಿಯೇ ಇರುತ್ತೇನೆ. ಶಿಕ್ಷಕನ ಸ್ಥಾನವೇ ನನಗೆ ದೊಡ್ಡ ಪದವಿ. ಎಂದು ಹೇಳಿದರು. "ನಾಯಕರಿಗೆ ನಾಯಕನೇ ಈ ಶಿಕ್ಷಕ." ಮಕ್ಕಳ ಭವಿಷ್ಯವನ್ನು ಬರೆಯುವ ಅವಕಾಶ ಬ್ರಹ್ಮನಿಗಿಲ್ಲ. ಆದರೆ ಈ ಗುರು ಬ್ರಹ್ಮರಿಗೆ ಇದೆ. ಅಂದು ಇಂದು ಎಂದೆಂದಿಗೂ ಗುರುವಿಗೆ ಉತ್ತಮ ಗೌರವವಿದೆ. ಅದನ್ನು ಉಳಿಸಿಕೊಳ್ಳಬೇಕಷ್ಟೇ. ಒಂದೇ ಅಂಶದಿಂದ ಮಾತ್ರ ಉತ್ತಮ ಶಿಕ್ಷಕ ಎನ್ನಲಾಗದು. ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತಾ, ಅವರ ವರ್ತನೆಯಲ್ಲಿ ಪರಿವರ್ತನೆ ಮಾಡುತ್ತಾ, ಉತ್ತಮ ಪಾಠ, ನಡೆ, ನುಡಿ, ಮತ್ತು ಮಾದರಿಯಾಗಿದ್ದುಕೊಂಡು ವಿದ್ಯಾರ್ಥಿಗಳನ್ನು ಸರ್ವಾಂಗೀಣ ವ್ಯಕ್ತಿತ್ವ ವಿಕಾಸ ಮಾಡುವವನೇ ನಾಯಕತ್ವದ ಗುಣಗಳುಳ್ಳ ಉತ್ತಮ ಶಿಕ್ಷಕ.

**"ಎದೆಯ ಹಣತೆಯಲ್ಲಿ ಅಕ್ಷರದ ದೀಪ ಹೊತ್ತಿಸಿ,**
**ಅನೇಕ ಮಂದಿಯ ಬಾಳಿಗೆ ಭವ್ಯ ಬೆಳಕು ಚೆಲ್ಲುವ**
**ಪರಮ ಗುರುಗಳಿಗೆ ನಮೋ ನಮ:"**

# ಶಿಕ್ಷಕ ಮತ್ತು ವಿದ್ಯಾರ್ಥಿ

■ ಸುವರ್ಣಾ ಭಟ್ಟ ಶಿರಸಿ



ಶಿ- ಶಿಕ್ಷಣ ನೀಡುವವರು ( ಜ್ಞಾನ) ಕ್ಷ- ಮಕ್ಕಳ ತಪ್ಪುಗಳ ಕ್ಷಮಿಸಿ ಸರಿಯಾದ ಮಾರ್ಗದರ್ಶನ ನೀಡುವವರು ಕ- ಕೈಹಿಡಿದು ಅಕ್ಷರಗಳ ಕಲಿಸುವವರು ಗುರು- ವಿದ್ಯಾರ್ಥಿಗಳಿಗೆ ತಮ್ಮ ಗುರಿಯ ಮುಟ್ಟಲು ಮಾರ್ಗದರ್ಶನ ನೀಡುವವರು. ವಿದ್ಯಾರ್ಥಿ- ವಿಧೇಯತೆಯಿಂದ ನಡೆದುಕೊಂಡು ವಿದ್ಯೆ ಕಲಿಯುತ್ತಾ ಗುರುಗಳ ಗೌರವಿಸುವವನು ವಿದ್ಯಾರ್ಥಿ. ತಾಯಿ ಮಗುವಿನ ಮೊದಲ ಗುರು. ಆದರೆ "ಮಗು ತನ್ನ ಜೀವನ ರೂಪಿಸಿಕೊಳ್ಳಲು ಗುರುವಿನ ಅಗತ್ಯವಿರುವುದು". ಮಣ್ಣಿನ ಮುದ್ದೆಯಂತಿರುವ ಮಗುವಿಗೆ ಪ್ರಾಥಮಿಕ ಹಂತದಲ್ಲಿ ಆ ಮಗುವ ತಿದ್ದಿ ಬೆಳೆಸುವವರು ಪ್ರಾಥಮಿಕ ಹಂತದ ಶಿಕ್ಷಕರು. ಮನೆಯಲ್ಲಿ ಆಟವಾಡಿಕೊಂಡಿದ್ದ ಮಗುವ ಒಂದೆಡೆ ಕೂರಿಸಲು ಮೊದ ಮೊದಲು ತುಂಬಾ ಕಷ್ಟವಾಗುತ್ತದೆ. ಅಂತಹ ಮಗುವ ಒಂದೆಡೆ ಕುಳಿತು ಪಾಠ ಆಲಿಸಿ ಬರೆಯುವಂತೆ ಮಾಡುವವರು ಶಿಕ್ಷಕರು. ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಮಕ್ಕಳ ಹಿತಾಸಕ್ತಿ ಬಯಸುವವರು ಶಿಕ್ಷಕರು. ಮನೆಯಲ್ಲಿ ಒಂದು ಮಕ್ಕಳ ನೋಡಿಕೊಳ್ಳಲು ನಮಗೆ ಕಷ್ಟವಾಗುವುದು ಆದರೆ, ಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳ ಸ್ವಂತ ಮಕ್ಕಳಂತೆ ನೋಡಿಕೊಂಡು ಅವರಿಗೆ ಪಾಠಮಾಡಿ ಯಾವುದಾದರು ಮಗುವಿಗೆ ಅನಾರೋಗ್ಯವಾದರೆ ಪಾಲಕರಿಗೆ ತಿಳಿಸುವವರು ಶಿಕ್ಷಕರು.

ಶಿಕ್ಷಕರು ನಮ್ಮ ಕೈ ಹಿಡಿದು ಸ್ಲೇಟಿನಲ್ಲಿ ಬಳಪದಿಂದ ಬರೆಸುವ' ಅ, ಆ' ಅಕ್ಷರದಿಂದ ಆರಂಭವಾದ ಶಿಕ್ಷಣ ನಮ್ಮ ಜೀವನದುದ್ದಕ್ಕೂ ಉಪಯುಕ್ತವಾದುದ್ದಾಗಿದೆ. ಶಿಕ್ಷಕರು ಮಕ್ಕಳಲ್ಲಿ ಶಿಸ್ತು, ತಾಳ್ಮೆ, ಸಹಾಯ ಮನೋಭಾವ ಬೆಳೆಸುವರು.

ನಮ್ಮ ತುಂಟಾಟಗಳನ್ನು ಸಹಿಸಿಕೊಂಡು, ನಮಗೆ ಪಾಠಮಾಡಿ ನಮ್ಮ ಒಂದು ಹಂತಕ್ಕೆ ತಲುಪಿಸುವಲ್ಲಿ ಗುರುವಿನ ಶ್ರಮವಿರುವುದು. ನಾನು ಈಗ ನಾಲ್ಕು ಅಕ್ಷರ ಕಲಿತಿರುವುದಕ್ಕೆ ಕಾರಣ ನನ್ನೆಲ್ಲ ಗುರುಗಳ ಬೆಂಬಲ ಹಾಗೂ ತಂದೆ, ತಾಯಿಯ ಸಹಕಾರ. ಚಿಕ್ಕ ಮಕ್ಕಳು ಜಾಸ್ತಿ ಇಷ್ಟಪಡುವುದು ಹಾಡು ಮತ್ತು ಕಥೆಗಳು. ಅವುಗಳ ಹೇಳುತ್ತಲೇ ಶಿಕ್ಷಕರು ಪಾಠಗಳ ಮನದಟ್ಟು ಮಾಡುತ್ತಾರೆ. ಹಲವು ನೀತಿ ಕಥೆಗಳ ಮೂಲಕ ಮಕ್ಕಳ ಮನಸ್ಸನ್ನು ಓದಿನೆಡೆ ಕೇಂದ್ರೀಕರಿಸುವರು.ಆಟದ ಜೊತೆ ಪಾಠ ಹೇಳುವರು. ಮೊದಲು ಶಾಲೆ ಎಂದರೆ ಭಯ ಪಡುವ ಮಕ್ಕಳು ಸ್ವಲ್ಪ ದಿನದಲ್ಲಿಯೇ ಭಯ ಬಿಟ್ಟು ಉಳಿದ ಮಕ್ಕಳ ಜೊತೆ ಬೆರೆಯಲು ಶಿಕ್ಷಕರೇ ಸ್ಫೂರ್ತಿ ಆಗಿರುವರು.

ನಾನು ಗಮನಿಸಿದ ಪ್ರಕಾರ ಮಗು ಮತ್ತು ಶಿಕ್ಷಕರ ನಡುವೆ ಪ್ರೀತಿಯ ಭಾವ ಮೂಡಿದರೆ ಮಕ್ಕಳು ಕಲಿಕೆಯಲ್ಲಿ ಮುಂದೆ ಬರುವರು ಹಾಗೂ ಆ ಶಿಕ್ಷಕರನ್ನು ಅನುಕರಣೆ ಮಾಡುವರು. ಹಿರಿಯರು ಒಂದು ಮಾತು ಹೇಳುತ್ತಾರೆ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೆ?? ಎಂದು. ನಿಜ ಮಗುವನ್ನು ಗುರುವಾದವರು ಪ್ರಾಥಮಿಕ ಹಂತದಲ್ಲಿ ತಿದ್ದಿ ಸಮಾಜದಲ್ಲಿ ಒಳ್ಳೆಯ ಪ್ರಜೆಯನ್ನಾಗಿ ಮಾಡಲು ಶ್ರಮಿಸುವರು. ಶಿಕ್ಷಕರು ಮಗುವಿನ ಒಳಗೆ ಭಯದಿಂದ ಸೂಪ್ತವಾಗಿ ಕುಳಿತ ಪ್ರತಿಭೆಯನ್ನು ಹೊರ ತೆಗೆಯುವರು. ಶಾಲೆಯಲ್ಲಿ ನಡೆಯುವ ಯಾವುದೇ ಆಟೋಟ, ಪದ ಹೇಳುವುದು, ಪ್ರತಿಭಾಕಾರಂಜಿ ಇಂತಹ ಸ್ಪರ್ಧೆಯಲ್ಲಿ ಮಗುವಿಗೆ ಭಾಗವಹಿಸಲು ಪ್ರೇರೆಪಿಸುವರು. ಅವರ ಭಯವನ್ನು ಕಡಿಮೆಮಾಡುವರು. ತಾವು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವ ಮಗುವ ಚಪ್ಪಾಳೆಯ ಮೂಲಕ ಪ್ರೋತ್ಸಾಹಿಸುವರು. ಮಕ್ಕಳು ಸಹ ಶಿಕ್ಷಕರ ಮಾತನ್ನು ಪಾಲಿಸುವರು.

**ಉದಾಹರಣೆ:-** ನಾನು ಶಿಕ್ಷಕಿಯಾಗಿದ್ದ ಸಂದರ್ಭದಲ್ಲಿ ಪಾಲಕರೊಬ್ಬರು ನನ್ನನ್ನು ಭೇಟಿಯಾಗಲು ಬಂದರು. ಅವರು ಹೇಳಿದರು ಮೇಡಂ ನನ್ನ ಮಗನಿಗೆ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಗೊತ್ತಿಲ್ಲ ಅವನಿಗೆ ಸ್ವಲ್ಪ ಬುದ್ಧಿ ಹೇಳಿ, ನಮ್ಮ ಮಗ ನಮ್ಮ ಮಾತು ಕೇಳುವುದಿಲ್ಲ ನಿಮ್ಮ ಮಾತು ಕೇಳುತ್ತಾನೆ ಎಂದರು. ನನಗೆ ಆಶ್ಚರ್ಯ ವಾಯಿತು ! ಆ ಹುಡುಗ ಓದಿನಲ್ಲಿ ಜಾಣ ಹಾಗಿರುವಾಗ ಇದು ಹೇಗೆ ಸಾಧ್ಯ ?ಎಂದು ಯೋಚಿಸುತ್ತಾ ಮಗುವನ್ನು ಕರೆದು ವಿಚಾರಿಸಿದೆ. ಮಗು ಪ್ರಾಮಾಣಿಕವಾಗಿ ಒಪ್ಪಿಕೊಂಡ. ಮನೆಯ ಹಿರಿಯರ ಮಾತಿಗೆ ಗೌರವ ಕೊಡಬೇಕು ಎಂದು ತಿಳಿ ಹೇಳಿ ಕಳುಹಿಸಿದೆ. ಮತ್ತೊಮ್ಮೆ ಅವರ ತಂದೆ ಬಂದವರು ಖುಷಿಯಿಂದ ಮಗನ ವರ್ತನೆ ಬದಲಾಗಿರುವುದು ತಿಳಿಸಿದರು. ತಂದೆ ತಾಯಿ ಮಾತಿಗಿಂತಲೂ ಮಕ್ಕಳು ಶಿಕ್ಷಕರ ಮಾತನ್ನು ಪಾಲಿಸುವರು.

ಶಿಕ್ಷಕರು ಮಕ್ಕಳ ಜೀವನದ ಬುನಾದಿ, ಅಡಿಪಾಯ ಆಗಿರುವರು. ನಾವು ದಿನ ದಿನವೂ ಹೊಸತನ್ನು ಕಲಿಯುತ್ತಲೇ ಇರುವೆವು. ನಾವು ಶಾಲೆಗೆ ಹೋಗಿ ಕಲಿತಿರುವುದಷ್ಟೇ ಅಲ್ಲ ಪ್ರತಿಯೊಬ್ಬರಿಂದಲೂ ದಿನ ದಿನವೂ ಒಂದೊಂದು ವಿಷಯ ಕಲಿಯುತ್ತಲೇ ಇರುವೆವು ನಮಗೆ ದಾರಿ ದೀಪವಾದ ಪ್ರತಿಯೊಬ್ಬರು ಸಹ ನಮ್ಮ ಶಿಕ್ಷಕರು.

ಸಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಆಚರಿಸುವರು. ಮಕ್ಕಳ ಜೀವನ ನಿರೂಪಿಸುವ ಪ್ರತಿಯೊಂದು ಶಿಕ್ಷಕರಿಗೂ ಗೌರವ ನೀಡುವ ದಿನವಾಗಿದೆ. ಮಕ್ಕಳ ಜೀವನದಲ್ಲಿ ಶಿಕ್ಷಕರು ಮಗುವಿಗೆ ಒಳ್ಳೆಯ ಜೀವನದ ದಾರಿತೋರಿಸುವ ಮಹಾನ್ ನಾಯಕರು ಆಗಿರುತ್ತಾರೆ. ನನಗೆ ವಿದ್ಯೆ ಕಲಿಸಿದ ಪ್ರತಿಯೊಬ್ಬ ಶಿಕ್ಷಕರಿಗೂ ಧನ್ಯವಾದಗಳು. ಎಲ್ಲಾ ಶಿಕ್ಷಕರಿಗೂ ಶಿಕ್ಷಕರ ದಿನಾಚರಣೆಯ ಶುಭಾಶಯಗಳು.

## ಕವಿ ಮನಸು

### ಮಕ್ಕಳ ರಕ್ಷಕ

ಅಕ್ಷರ ಕಲಿಸಿದಾತ
ಅಕ್ಕರೆ ತೋರಿದಾತ
ಪ್ರೀತಿಯ ಹಂಚಿದಾತ
ನಗುತ ರಂಜಿಸಿದಾತ

ಕಷ್ಟಕ್ಕೆ ಮರಗಿದಾತ
ಕರುಣೆ ತಿಳಿಸಿದಾತ
ಬಿದ್ದವರ ಎತ್ತಿದಾತ
ಮಕ್ಕಳ ಅಪ್ಪಿದಾತ

ಸತ್ಯವ ನುಡಿದಾತ
ನೀತಿಯ ರೂಪಿಸಿದಾತ
ತಪ್ಪನ್ನು ತಿದ್ದಿದಾತ
ಸರಿದಾರಿ ತೋರಿದಾತ

ಮೌಢ್ಯತೆ ತೊಲಗಿಸಿದಾತ
ಜ್ಞಾನವ ಹರಿಸಿದಾತ
ಶಾಂತಿಯ ಕಲಿಸಿದಾತ
ಸಹಬಾಳ್ವೆ ನಡೆಸಿದಾತ

ಮಕ್ಕಳ ಗೆದ್ದವನೀತ
ದೈವದ ರೂಪವಂತ
ಧರೆಯ ಶ್ರೇಷ್ಠವಂತ
ಶಿಕ್ಷಕ ನೀ....ಪುನೀತ

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ

# ಮದ್ಯವರ್ತಿಗಳಿಗೆ ಪ್ರವೇಶ ಬೇಡ

## ನೋಂದಣಿ ಕಚೇರಿ ಸಿಬ್ಬಂದಿಗೆ ಜಿಲ್ಲಾಧಿಕಾರಿ ದಿವಾಕರ ಖಡಕ್ ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಉಪ ನೋಂದಣಿ ಕಚೇರಿಯಲ್ಲಿ ಯಾವುದೇ ಅನಧಿಕೃತ ವ್ಯಕ್ತಿಗಳು ಇರದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೂಚನೆ ನೀಡಿದರು.

ತಹಶೀಲ್ದಾರರ ಕಚೇರಿಯಲ್ಲಿನ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿಗೆ ದೂರು ಸ್ವೀಕೃತವಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ತಹಶೀಲ್ದಾರರ ಕಚೇರಿಗೆ ಮಂಗಳವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ಕೈಗೊಂಡರು. ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕು. ಸಾರ್ವಜನಿಕರಿಗೆ ಸರಿಯಾಗಿ ಸ್ಪಂದನೆ ನೀಡಬೇಕು. ಎನಿವೇರ್ ನೋಂದಣಿ ವ್ಯವಸ್ಥೆ ವಿಜಯನಗರ ಜಿಲ್ಲೆಗೂ ವಿಸ್ತರಣೆಯಾಗಿದೆ. ಎನಿವೇರ್ ನೋಂದಣಿಯಲ್ಲಿ ದಸ್ತಾವೇಜನ್ನು ಸ್ಥಿರಾಸ್ತಿ ಇರುವ ಜಿಲ್ಲೆಯ ಯಾವುದಾದರೂ ಉಪನೋಂದಣಿ ಕಚೇರಿಯಲ್ಲಿ ನೋಂದಾಯಿಸಿ ಕೊಳ್ಳಬಹುದಾಗಿದೆ. ಈ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಪ್ರತಿ ಸೋಮವಾರ, ಮಂಗಳವಾರ ಪೌತಿ, ವಾರಸು ಖಾತೆ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಗ್ರಾಮ ಆಡಳಿತ ಅಧಿಕಾರಿಗಳಿಗೆ ನೇರವಾಗಿ ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಪೌತಿ ಖಾತೆ ಬದಲಾವಣೆ





ಮಾಡಿಸಿ ಕೊಳ್ಳಬಹುದು. ಈ ಬಗ್ಗೆ ಗ್ರಾಮ ಆಡಳಿತ ಅಧಿಕಾರಿಗಳು ಗಮನ ಹರಿಸಬೇಕು ಎಂದು ಸೂಚನೆ ನೀಡಿದರು.

ಆಹಾರ ಇಲಾಖೆಯಲ್ಲಿ ಸಾರ್ವಜನಿಕರ ಕೆಲಸಗಳು ಮಂದಗತಿಯಲ್ಲಿ ಆಗುತ್ತಿವೆ ಎನ್ನುವ ದೂರುಗಳಿದ್ದು ಈ ಬಗ್ಗೆ ಇಲಾಖಾ ಅಧಿಕಾರಿಗಳು ಗಮನ ಹರಿಸಬೇಕು. ಯಾವುದೇ ಕೆಲಸಕ್ಕೆ ಸಾರ್ವಜನಿಕರು ಕಾಯಬಾರದು ಎಂದು ತಿಳಿಸಿದರು.

ವಾರ್ತಾ ಇಲಾಖೆಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಯ ಹಾಜರಾತಿ ಪರಿಶೀಲಿಸಿ ಸಿಬ್ಬಂದಿಯ ಕೆಲಸ ಕಾರ್ಯದ ಬಗ್ಗೆ ವಿಚಾರಿಸಿದರು.

ಶುಚಿತ್ವದ ಕಡೆ ಗಮನ ನೀಡಿ: ವಿವಿಧ ತಾಲೂಕು ಕಚೇರಿಗಳನ್ನು ಹೊಂದಿರುವ ತಾಲೂಕು ಕಚೇರಿ ಸಂಕೀರ್ಣದ ಸುತ್ತಲು ಶುಚಿತ್ವ ಕಾಯ್ದುಕೊಳ್ಳಬೇಕು. ಇಲ್ಲಿ ಸಾರ್ವಜನಿಕ ಶೌಚಾಲಯ ಸರಿಯಾಗಿ ನಿರ್ವಹಣೆ ಆಗಬೇಕು. ವಿವಿಧ ಕಚೇರಿಗಳಿಗೆ ಬರುವ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು. ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು. ಎಲ್ಲೆಂದರಲ್ಲಿ ಬಿದ್ದಿರುವ ಕಸದ ರಾಶಿಯನ್ನು ಕೂಡಲೇ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಹವಾಲು ಸ್ವೀಕಾರ: ಹೊಸಪೇಟೆ ತಹಶೀಲ್ದಾರ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೆಲವು ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ತಮ್ಮ ಅಹವಾಲುಗಳನ್ನು ನೀಡಿದರು. ಇದೇ ವೇಳೆ ವಿದ್ಯಾರ್ಥಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಎನ್‌ಇಪಿ ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ದೂರು ನೀಡಿದರು. ಜಿಲ್ಲಾಧಿಕಾರಿಗಳು, ಸಂಬಂಧಿಸಿದ ಅಧಿಕಾರಿಗಳಿಗೆ ಸ್ಥಳದಲ್ಲೇ ದೂರವಾಣಿಯೊಂದಿಗೆ ಮಾತನಾಡಿ ಸ್ಪಂದನೆ ನೀಡಿದರು.

ಈ ಸಂದರ್ಭದಲ್ಲಿ ಗ್ರೇಡ್–2 ತಹಶೀಲ್ದಾರರಾದ ವೆಂಕಟೇಶ್ ಆಶ್ರಿತ್, ಶೀರಸ್ತೇದಾರರಾದ ಶ್ರೀಧರ್ ಎಸ್ ಸೇರಿದಂತೆ ತಹಸೀಲ್ದಾರ ಕಚೇರಿ ಮತ್ತು ಇನ್ನಿತರ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಪಂಪ್‌ಸೆಟ್‌ಗೆ ಆಧಾರ್ ಜೋಡಣೆ

ಮೊದಲ ಪುಟದಿಂದ

ಮೂಲಕ ಮೀಟರ್ ಅಳವಡಿಸಿ ವಿದ್ಯುತ್ ಶುಲ್ಕ ವಿಧಿಸುವ ಯೋಜನೆಯನ್ನು ಜಾರಿ ಮಾಡಬಾರದು. ಗೃಹಬಳಕೆ 200 ಯೂನಿಟ್‌ಗಿಂತ ಹೆಚ್ಚುವರಿಯಾಗಿ ಬಂದಂತಹ ಯುನಿಟ್ ಧರವನ್ನು ಈ ಕೂಡಲೇ ಕಡಿಮೆ ಮಾಡಬೇಕು. ವಿದ್ಯುತ್ ಅಪಘಾತಗಳಿಗೆ ಸಿಲುಕಿ ಮರಣ ಹೊಂದುವ ವ್ಯಕ್ತಿಯ ಕುಟುಂಬಕ್ಕೆ ರೂ.10,00,000/–ಗಳ ಪರಿಹಾರವನ್ನು ನೀಡಬೇಕು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ 7 ತಾಸಿನಿಂದ 8 ತಾಸಿನವರೆಗೆ ನಿರಂತರ ವಿದ್ಯುತ್ ಸಂಪರ್ಕವನ್ನು ನೀಡಬೇಕು. ಹಳ್ಳಿಗಳಿಗೆ ನಿರಂತರ ವಿದ್ಯುತ್ ಪೂರೈಸಬೇಕು. ಐದಾರು ದಶಕಗಳಿಂದ ಇರುವ ವಿದ್ಯುತ್ ತಂತಿಗಳನ್ನು ಬದಲಿಸಬೇಕು ಸೇರಿದಂತೆ ಇತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಟಿ.ನಾಗರಾಜ್ ಮಾತನಾಡಿ, ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಿಸಲು ರೈತರು ಕಚೇರಿಗೆ ಹತ್ತಾರುಬಾರಿ ಅಲೆದಾಡುವಂತಾಗಿದೆ. ರೈತರಿಗೆ ಉಚಿತವಾಗಿ ನಿಡಬೇಕಿದ್ದ ಸೌಲಭ್ಯಗಳಿಗೂ ಹಣ ಪಡೆಯಲಾಗುತ್ತಿದೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಗಮನಹರಿಸಿ ರೈತರಿಗೆ ಅನುಕೂಲ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಜಿಲ್ಲಾ ಕಾರ್ಯಧ್ಯಕ್ಷ ಎಂ.ಜಡೆಪ್ಪ, ರಾಜ್ಯ ಉಪಾಧ್ಯಕ್ಷ ಜೈರುದ್ದೀನ್, ತಾಲೂಕು ಉಪಾಧ್ಯಕ್ಷ ಜಾಕೀರ್, ಪದಾಧಿಕಾರಿಗಳಾದ ಮೂರ್ತಿ ಹೆಚ್.ಸತೀಶ್, ಎ.ರಾಮಾಂಜಿನಿ, ವಿ.ಗಾಳೆಪ, ಸುರೇಶ್, ಕೆ.ರಾಮಾಂಜಿನಿ, ಎಲ್.ನಾಗೇಶ್, ಇತರರಿದ್ದರು.

# 6 ವರ್ಷದ ಶೈಲು ಹೆಣ್ಣು ಮಗುವಿನ ಪೋಷಕರ ಪತ್ತೆಗೆ ಮನವಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿಯ ರೈಲ್ವೆ ನಿಲ್ದಾಣದ ಫ್ಲಾಟ್ ಫಾರಂ ಸಂಖ್ಯೆ 1ರಲ್ಲಿ ಯಾರೋ ಅನಾಮಧೇಯ ವ್ಯಕ್ತಿಗಳು ಬಿಟ್ಟು ಹೋದ ಸುಮಾರು 6 ವರ್ಷದ ಶೈಲು ಎಂಬ ಹೆಣ್ಣು ಮಗುವಿನ ಪೋಷಕರ ಪತ್ತೆಗಾಗಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಳ್ಳಾರಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿಗಳಾದ ಚನ್ನಬಸಪ್ಪ ಅವರು ಅನಾಮಧೇಯ ವ್ಯಕ್ತಿಗಳು ಬಿಟ್ಟು ಹೋದ ಸುಮಾರು 6 ವರ್ಷದ ಶೈಲು ಎಂಬ ಹೆಣ್ಣು ಮಗುವಿನ ಪೋಷಕರ ಪತ್ತೆಗಾಗಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ.

**ಚಹರೆ:** ಮಗುವಿಗೆ ಸುಮಾರು 6 ವಯಸ್ಸಾಗಿದ್ದು, ಕನ್ನಡ ಭಾಷೆ ಮಾತನಾಡುತ್ತಾಳೆ. ಮಗುವು ದುಂಡು ಮುಖ, ಗೋಧಿ ಮೈಬಣ್ಣ ಹೊಂದಿರುತ್ತಾಳೆ. ದಿನಾಂಕ 19/07/2024 ರಂದು ಸುಮಾರು ರಾತ್ರಿ 11ರಿಂದ 12 ಗಂಟೆಯ ಸುಮಾರಿಗೆ ಬಳ್ಳಾರಿ ರೈಲ್ವೆ ನಿಲ್ದಾಣ ಫ್ಲಾಟ್ ಫಾರಂ ನಂ 01 ರಲ್ಲಿ ಸಿಕ್ಕಿರುತ್ತಾಳೆ. ಮಗುವಿನ ಪೋಷಕರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ರೈಲ್ವೆ ಪಿ.ಎಸ್. 08392–276063 ಮೊ.ನಂ 9480802131 ಇ–ಮೇಲ್: bellaryrly@ksp.gov.in ಗೆ ಅಥವಾ ಬೆಂಗಳೂರು ರೈಲ್ವೇ ಕಂಟ್ರೋಲ್ ರೂಂ ಇ–ಮೇಲ್: derly@ksp.gov.in ಗೆ ಮಾಹಿತಿ ನೀಡಿ ಎಂದು ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರಾವಣ ಮಾಸದ ವಿರೂಪಾಕ್ಷೇಶ್ವರ ಮಾಲಾಧಾರಣೆ ಸಂಪನ್ನ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯಲ್ಲಿಶ್ರೀವಿರೂಪಾಕ್ಷೇಶ್ವರಮಾಲಾಧಾರಿಗಳು ಶ್ರಾವಣ ಮಾಸದ ಅಮಾವಾಸ್ಯೆ ಮರುದಿನ ವಿದ್ಯಾರಣ್ಯ ಪೀಠದ ಜಗದ್ಗುರು ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮಿಗಳ ಆಶೀರ್ವಾದ ಪಡೆದು ಅವರಿಂದ ಮಾಲಾ ಧಾರಣೆ ಮಾಡಿಸಿಕೊಂಡು ಆರಂಭಗೊಂಡಿದ್ದ ವ್ರತಾಚರಣೆ ಭಾದ್ರಪದ ಅಮಾವಾಸ್ಯೆಯ ಮುನ್ನ ಸಂಪನ್ನಗೊಂಡಿತು.

ಧಾರ್ಮಿಕ ಪೂಜಾ ವಿಧಾನಗಳೊಂದಿಗೆ



ಮಂಗಳವಾರ ಮಾಲಾಧಾರಿಗಳು ಮಾಲೆ ವಿಸರ್ಜನೆ ಮಾಡಿದರು.

ಮಾಲಾಧರಣೆಯಿಂದ ಒಂದು ತಿಂಗಳ ಕಾಲ ಮನಸ್ಸಿಗೆ ನೆಮ್ಮದಿ ಶಾಂತಿ ದೊರಕುತ್ತದೆ ಎಂದು ಮಾಲಾಧಾರಿ ಗೋಪಾಲ್ ತಿಳಿಸಿದರು.

ಹಂಪಿ ಗ್ರಾಮದ ಮಾಲಾಧಾರಿಗಳಾದ ಶಿವು, ಗೋಪಿ, ರಾಜೇಶ್, ಶಾಂತಕುಮಾರ್ ಹಂಪಿ, ವೀರೇಶ್, ಶಿವಾನಂದ ಸೇರಿದಂತೆ ಹನುಮ ಮಾಲಾಧಾರಿಗಳೂ ಉಪಸ್ಥಿತರಿದ್ದರು.

# ಕಮಲಾಪುರ ಪ.ಪಂ.ಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಅವಿರೋಧ ಆಯ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಕಮಲಾಪುರ ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು.

17ನೇ ವಾರ್ಡಿನ ಕಾಂಗ್ರೆಸ್ ಪಕ್ಷದ ಸದಸ್ಯೆ ಅಮೀನಾ, ಉಪಾಧ್ಯಕ್ಷ ಸ್ಥಾನಕ್ಕೆ 4ನೇ ವಾರ್ಡಿನ ಪಕ್ಷೇತರ ಸದಸ್ಯ ಹಾಗೂ ಕಾಂಗ್ರೆಸ್ ಪಕ್ಷದ ಸಹ ಸದಸ್ಯ ಹೆಚ್.ಗೋಪಾಲಕೃಷ್ಣ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಇಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ತಹಶೀಲ್ದಾರ್ ಶೃತಿ ಎಂ. ತಿಳಿಸಿದರು.

ಕಾಂಗ್ರೆಸ್ ಪಕ್ಷದ ವತಿಯಿಂದ ಆಯ್ಕೆಯಾದ ಎಲ್ಲಾ ಸದಸ್ಯರಿಗೂ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಸಿರಾಜ್ ಶೇಖ್ ಸಚೇತಾ ದೇಶವನ್ನು (ವಿಪ್) ಜಾರಿಗೊಳಿಸಿದರು. ಕಮಲಾಪುರ ಪಟ್ಟಣ ಪಂಚಾಯಿತಿ ಅಧಿಕಾರಿಗಳು, ಸದಸ್ಯರು, ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು


## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**05–09–2024 – ಗುರುವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರ ಫಾಲ್ಗುಣ |
| ಯೋಗ | : ಶುಭ |
| ಕರಣ | : ಕೌಳವ |
| ಸೂರ್ಯೋದಯ | : 06:11:34 |
| ಸೂರ್ಯಾಸ್ತ | : 18:39:02 |
| ರಾಹು ಕಾಲ | : 13:59–15:32 |
| ಯಮಘಂಡ ಕಾಲ | : 06:12–07:45 |
| ಗುಳಿಕ ಕಾಲ | : 09:18–10:52 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 04–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.92 ಅಡಿ |
| ಒಳ ಹರಿವು | 39945 ಕ್ಯುಸೆಕ್ |
| ಹೊರ ಹರಿವು | 15235 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.461 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1624.16 ಅಡಿ |
| ಒಳ ಹರಿವು | 559 ಕ್ಯುಸೆಕ್ |
| ಹೊರ ಹರಿವು | 8737 ಕ್ಯುಸೆಕ್ |
| ಸಾಮರ್ಥ್ಯ | 73.778 ಟಿಎಂಸಿ |

# ಕೇಸರಿ ಸಿಂಹದ ಹುಟ್ಟುಹಬ್ಬ

ಮೊದಲ ಪುಟದಿಂದ

ಮುಂದುವರೆಯುವ ಹಾಗೆ ಪ್ರಾಣಿಗಳನ್ನು ರಕ್ಷಣೆ ಮಾಡುವ, ಅವುಗಳನ್ನು ಉಳಿಸಿಕೊಂಡು ಹೋಗುವ ಮಹತ್ವದ ಜವಾಬ್ದಾರಿ

ನಮ್ಮೆಲ್ಲರ ಮೇಲಿದೆ. ಅದರಂತೆ ಮೃಗಾಲಯದಲ್ಲಿನ ಪ್ರಾಣಿಗಳ ಪಾಲನೆ–ಪೋಷಣೆ ಮಾಡುವಲ್ಲಿ ಮೃಗಾಲಯದ ಸಿಬ್ಬಂದಿಯು ತಂದೆ ತಾಯಿಯರಿಗೆ ಇರುವ ಕಾಳಜಿಯ ಗುಣಹೊಂದಿ ಕಾರ್ಯ ನಿರ್ವಹಿಸುವಂತಾಗಬೇಕು. ಆಸಕ್ತರು, ಪ್ರಾಣಿಗಳನ್ನು ದತ್ತು ಪಡೆಯಲು ಮುಂದೆ ಬರಬೇಕು ಎಂದು ಸಲಹೆ ಮಾಡಿದ ಶಾಸಕರು, ತಾವು ಕೂಡ ಈ ವರ್ಷ ಎರಡು ಪ್ರಾಣಿಗಳನ್ನು ದತ್ತು ಪಡೆಯಲು ಯೋಜಿಸಿದ್ದಾಗಿ ತಿಳಿಸಿದರು.




ಪಾರ್ಕ್ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕರು ರಾಜೇಶ್ ನಾಯಕ್ ಮಾತನಾಡಿ, ಕಮಲಾಪುರದ ಪ್ರಾಣಿ ಸಂಗ್ರಹಾಲಯದಲ್ಲಿ 33 ಜಾತಿಯ ಒಟ್ಟು 380ಕ್ಕಿಂತ ಹೆಚ್ಚು ಪ್ರಾಣಿಗಳಿವೆ. ಕೇಸರಿ ಸಿಂಹವು 2015ರಲ್ಲಿ ಜನಿಸಿದ್ದು ಇಂದಿಗೆ 9 ವರ್ಷಗಳನ್ನು ಪೂರೈಸಿದೆ ಎಂದು ತಿಳಿಸಿದರು.

ನಮ್ಮ ಭಾಗದ ಪರಿಸರದಲ್ಲಿ ಸಿಂಹಗಳಿಗೆ ಬೇಕಾದ ವಾತಾವರಣವನ್ನು ರೂಪಿಸುವುದು ತುಂಬ ಕಷ್ಟಕರ. ನಾವು ಹಂಪಿಯಂತಹ ಐತಿಹಾಸಿಕ ತಾಣ ಹೊಂದಿದ್ದೇವೆ. ಇಲ್ಲಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ಜಾಗತಿಕ ಪ್ರಸಿದ್ಧ ಹಂಪಿಯ ಪರಿಸರದಲ್ಲಿ ನಾವಿರುವುದು ನಮಗೆ ಸಾಕಷ್ಟು ಅನುಕೂಲವಿದೆ. ನಮ್ಮ ಮುಂದಿನ ಯೋಜನೆಗೆ ಇದು ಸಹಕಾರಿಯಾಗಲಿದೆ. ಹಂಪಿಯಲ್ಲಿರುವುದರ ಸದುಪಯೋಗ ಪಡೆದು ಕಮಲಾಪುರದ ಪ್ರಾಣಿ ಸಂಗ್ರಹಾಲಯವನ್ನು ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿಸುವ ಮಹತ್ವದ ಗುರಿ ಹೊಂದಿದ್ದೇವೆ ಎಂದು ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಆನಂದ, ಜಿಯಾಲಾಜಿಕಲ್ ಪಾರ್ಕನ ವೈದ್ಯಾಧಿಕಾರಿಗಳಾದ ವಾಣಿ ಹಾಗೂ ದಾದಾಪೀರ, ಕಾಳಪ್ಪ, ಅಂಜಿನಪ್ಪ, ಗುಜ್ಜಲ ನಾಗರಾಜ್, ದೀಪಕ್, ಪ್ರಭಾಕರ ಮತ್ತು ಡಿಎವಿ ಸ್ಕೂಲ್ ವಿದ್ಯಾರ್ಥಿಗಳು, ಜಿಯಾಲಾಜಿಕಲ್ ಪಾರ್ಕನ ಸಿಬ್ಬಂದಿ ಉಪಸ್ಥಿತರಿದ್ದರು

# ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿ ಆಯ್ಕೆಗೆ ನಾಮನಿರ್ದೇಶನ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸ್ಥಾಪಿಸಿರುವ ಐದು ಲಕ್ಷ ರೂಪಾಯಿ ನಗದನ್ನು ಒಳಗೊಂಡ "ಮಹಾತ್ಮಗಾಂಧೀ ಸೇವಾ ಪ್ರಶಸ್ತಿ–ಕರ್ನಾಟಕ"ಗೆ 2024 ನೇ ಸಾಲಿಗೆ ಅರ್ಹ ಸಾಧಕರನ್ನು ಅಥವಾ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲು ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.

ಸಾರ್ವಜನಿಕ ಜೀವನದಲ್ಲಿ ಮಹಾತ್ಮಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿ ಕೊಂಡು ಜೀವನ ನಡೆಸುತ್ತಿರುವ ಕನಿಷ್ಠ 60 ವರ್ಷಗಳಾಗಿರುವ ವ್ಯಕ್ತಿಗಳು ಅಥವಾ 25 ವರ್ಷಗಳು ತುಂಬಿರುವ ಸೇವಾ ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು. ಪ್ರಶಸ್ತಿಯನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯನ್ನು ರಚಿಸಲಾಗುವುದು. ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆ, ಅಹಿಂಸೆ, ಮಹಿಳಾ ಸಬಲೀಕರಣ, ಗ್ರಾಮೀಣ ನೈರ್ಮಲ್ಯ, ಮದ್ಯಪಾನ ವಿರೋಧಿ ನೀತಿ, ಈ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು ಅಥವಾ ಸಂಘ ಸಂಸ್ಥೆಗಳು ಅಥವಾ ವ್ಯಕ್ತಿಗಳು ನಾಮನಿರ್ದೇಶನ ಕೂಡ ಮಾಡ ಬಹುದಾಗಿದೆ. ಸೆಪ್ಟೆಂಬರ್ 19 ರ ಸಂಜೆ 5.30 ರೊಳಗಾಗಿ ಅರ್ಜಿಗಳನ್ನು ಆಯುಕ್ತರು, ವಾರ್ತಾ, ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ನಂ. 17, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು–560 001 ಅಥವಾ ಇ–ಮೇಲ್: informationdiprawards@gmail.com ವಿಳಾಸಕ್ಕೆ ಕಳುಹಿಸಬಹುದು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## Prose : Gentleman of Rio- En –Medio

**Most Improtent 2/3 makrs Questions and answers**

**1. "Don Anselmo's appearance and manners were quite unusual.' Support this statement.**

Ans : Don Anselmo wore the old, long, faded coat. He wore torn gloves through which his finger tips showed. He carried a worn-out umbrella's skeleton as a stick. The manner of him removing the hat is resembled like Charles Chaplin. He was very much passionate about the nature, so he used to plant a tree when a child was born in the village. By all these factors, we could say that his appearance and mannerisms were quite unusual.

**2. How can you say that Don Anselmo was passionate about his land and the children of Rio-en-Medio?**

Ans : Don Anselmo was very much passionate about his land and the children. The land had been inherited by his ancestors. He took possession of his house from his mother. Everyone in the village was his relatives, and all the children were his nieces and nephews. He used to plant a tree when a child was born in Rio en Medio. He felt that the trees belonged to the children, so he sold only the land but not the trees.

**3. Why do you think the Americans wanted to buy Don Anselmo's land?**

Ans : The reason was clearly mentioned in the lesson that the orchard was so good, beautiful, and fruitful. A stream was running through the orchard.The trees had more fruits. The land was big and fertile. Therefore the Americans wanted to buy Anselmo's land.

**4. How can you say that Don Anselmo was generous in his own way? Or What makes you feel that Don Anselmo was a man of principles?**

Ans : Don Anselmo was not only generous but also a man of principles.He stuck to his words and action. He refused to accept more money for his property even Americans were ready to pay double for it. He sold only the land but not the trees because he loved the children and planted a tree for every child.

**5. 'Don Anselmo said that Americans were really good people.' If you agree with his statement give reasons. Or How can you say that Americans were generous in their own way?**

Ans : When Americans complained that children were playing, dancing under the trees, Don Anselmo replied that he sold only the land but not the trees. He thought that the children were the real owners of the trees. After hearing Anselmo, they did not quarrel with the old man though they had the legal right to own the trees.Therefore Americans were generous and good people.

**6. What did the story teller request to Don Anselmo after the complaint of Americans?**

Ans : The narrator told Don Anselmo as per the deed,theAmericanshadthecompletepossession of the property. But the children of the village over ran and spent most of their time in the orchard everyday. He requested the old man to stop the children so that the Americans could be lived peacefully.

**7. How was the problem of ownership resolved by the Americans?**

Ans : Americans could do nothing because they ownedthetreeslegally.ThenarratororAmericans convinced the persons individually. It was a long process to convince everyone. At last Americans boughtthetreesindividuallyfromthedescendants in the most of the following winter. In this way the problem was resolved.

**8. Don Anselmo had concern for the children of Rio-en-medio. Explain briefly.**

Ans : Don Anselmo was the oldest man in Rio-en-Medio. He was passionate about his land and the children of Rio-en-Medio. Every time a child is born in the village, he planted a tree. When he sold his land he did not sell the trees.

www.hampitimes.com - Hampi Times Margadarshi

Prepared by : **R.B.Gurubasavaraj** English Teacher. G.H.S. Basarakodu, H.B.Halli Tq, Vijayanagara Dist

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ


ನಂದಿ ಬಸವರಾಜ ವಿಶ್ರಾಂತ ಶಿಕ್ಷಕರು
ಕೂಡ್ಲಿಗಿ.ಸ.ಹಿ.ಪ್ರಾ.ಶಾಲೆ. ಸೊಲ್ಲಮ್ಮ ಮಂದಿರ ಕೂಡ್ಲಿಗಿ


ನಂದಿ ಬಸವರಾಜ ವಿಶ್ರಾಂತ ಶಿಕ್ಷಕರು
ಕೂಡ್ಲಿಗಿ.ಸ.ಹಿ.ಪ್ರಾ.ಶಾಲೆ. ಸೊಲ್ಲಮ್ಮ ಮಂದಿರ ಕೂಡ್ಲಿಗಿ

# ಶಿಕ್ಷಕರ ದಿನಾಚರಣೆ ಶುಭಾಶಯಗಳು
## ಸವಿ ಸವಿ ನೆನಪು ಸಾವಿರ ನೆನಪು


ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಹೊಪಸೇಟೆ, ವಿಜಯನಗರ


ಶಿಕ್ಷಕಿ ಶ್ರೀಮತಿ.ನಂದಿನಿ ಸನಬಾಳ್ ಅವರೊಂದಿಗೆ ವಿದ್ಯಾರ್ಥಿಗಳು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಾಳಾ ಕಲಬುರಗಿ.


ಶಿಕ್ಷಕಿ ಶ್ರೀಮತಿ ರಾಜೇಶ್ವರಿ ಅವರೊಂದಿಗೆ ಅವರ ವಿದ್ಯಾರ್ಥಿನಿ ಈಗ ಶಿಕ್ಷಕಿ ಶ್ರೀಮತಿ.ನಂದಿನಿ ಸನಬಾಳ್


ಶಿಕ್ಷಕಿ ಶ್ರೀಮತಿ.ನಂದಿನಿ ಸನಬಾಳ್ ಅವರೊಂದಿಗೆ ವಿದ್ಯಾರ್ಥಿಗಳು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಾಳಾ ಕಲಬುರಗಿ.


ಕವಿ ಚೆನ್ನವೀರ ಕಣವಿ ಅವರೊಂದಿಗೆ ಡಿ.ವೆಂಕಟೇಶ ಹೊಸಪೇಟೆ


ಕವಿ ಚೆನ್ನವೀರ ಕಣವಿ ಅವರೊಂದಿಗೆ ದಂಪತಿ ಶ್ರೀಮತಿ ಶ್ರೀ ಸರಳಾ ಡಿ.ವೆಂಕಟೇಶ ಹೊಸಪೇಟೆ


ಗುರುಗಳಾದ ಶ್ರೀ ಜಿ.ಜಿ.ನಾಗರಾಜ್ ಜೊತೆ ಬಸವರಾಜ.ಕೆ ಅಧ್ಯಕ್ಷರು ಕ.ರಾ.ಪ್ರಾ.ಶಾ.ಶಿ.ಸಂಘ ಹೊಸಪೇಟೆ


ಹೊಸಪೇಟೆ ನ್ಯಾಷನಲ್ ಕಾಲೇಜ್ ಪ್ರಾಂಶುಪಾಲರಾದ ಶ್ರೀ ಶಶಿಧರ ಅವರೊಂದಿಗೆ ವಿದ್ಯಾರ್ಥಿಗಳು



ಮಂಗಳೂರಿನ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ವೈದ್ಯಕೀಯ ಕಾಲೇಜು ಗುರುಗಳೊಂದಿಗೆ ವಿದ್ಯಾರ್ಥಿಗಳ ಸಂಭ್ರಮದ ಸವಿ ಸವಿ ನೆನಪಿನ ಕ್ಷಣ

# ಶಿಕ್ಷಕರ ದಿನಾಚರಣೆ..... ಒಂದು ವಿಶ್ಲೇಷಣೆ

**ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ**

ಅದೊಂದು ಹೃದಯಸ್ಪರ್ಶಿ ಸನ್ನಿವೇಶ. ವಿಶ್ವವಿದ್ಯಾನಿಲಯದ ಉಪಕುಲಪತಿ ಓರ್ವರು ಉಪರಾಷ್ಟ್ರಪತಿಗಳಾಗಿ ಆಯ್ಕೆಯಾದರು. ವಿಶ್ವವಿದ್ಯಾಲಯದ ವತಿಯಿಂದ ಅವರಿಗೆ ಅದ್ದೂರಿ ಬೀಳ್ಕೊಡುಗೆ ನಡೆದು ಹೂಗಳಿಂದ ಸುಂದರವಾಗಿ ಅಲಂಕರಿಸಲ್ಪಟ್ಟ ಸಾರೋಟಿನಲ್ಲಿ ಆ ವ್ಯಕ್ತಿಯನ್ನು ಕೂರಿಸಿದ ವಿದ್ಯಾರ್ಥಿಗಳು ಕುದುರೆಯ ಬದಲಾಗಿ ತಾವೇ ಆ ಸಾರೋಟನ್ನು ಹೊತ್ತು ಮುನ್ನಡೆದು ರೈಲು ನಿಲ್ದಾಣದವರೆಗೂ ಮೆರವಣಿಗೆಯಲ್ಲಿ ಸಾಗಿದರು. ಬಹುಶಹ ಜಗತ್ತಿನ ಯಾವ ದೇಶದಲ್ಲಿಯೂ ಕಂಡು ಕೇಳರಿಯದ ಗೌರವ ಅಂದು ಶಿಕ್ಷಕರ ಪಾಲಿಗೆ ದೊರೆಯಿತು. ಅಂದು ಅವರನ್ನು ಹಾಗೆ ಗೌರವಿಸಿದ ವಿದ್ಯಾರ್ಥಿಗಳು ಕೂಡ ಮುಂದೆ ಕನ್ನಡ ನಾಡು ಕಂಡ ಅತ್ಯಂತ ಯಶಸ್ವಿ ಲೇಖಕರು, ಬುದ್ಧಿಜೀವಿಗಳು ಮತ್ತು ಸಂಶೋಧಕರು ಮತ್ತು ಹಾಗೆ ಗೌರವಿಸಲ್ಪಟ್ಟ ವ್ಯಕ್ತಿ ನಮ್ಮ ನಿಮ್ಮೆಲ್ಲರ ಅಚ್ಚುಮೆಚ್ಚಿನ ಶಿಕ್ಷಕ ಶಿರೋಮಣಿ ಡಾಕ್ಟರ್ ಎಸ್ ರಾಧಾಕೃಷ್ಣನ್. ಈ ಐತಿಹಾಸಿಕ ಮೆರವಣಿಗೆ ನಡೆದದ್ದು ಆ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದ ನಮ್ಮೆಲ್ಲರ ಹೆಮ್ಮೆಯ ವಿಶ್ವವಿದ್ಯಾನಿಲಯ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ.

ರಾಧಾಕೃಷ್ಣನ್ ಅವರು ಜನಿಸಿದ್ದು ಇಂದಿನ ತಮಿಳುನಾಡಿನ ತಿರುತ್ತಿಣಿ ಎಂಬ ಗ್ರಾಮದಲ್ಲಿ. ತಂದೆ ಸರ್ವಪಲ್ಲಿ ವೀರಾಸ್ವಾಮಿ, ತಾಯಿ ಸರ್ವಪಲ್ಲಿ ಸೀತಮ್ಮ. ಮೂಲತಃ ಇಂದಿನ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಸರ್ವಪಲ್ಲಿ ಗ್ರಾಮದವರು. ಇವರ ತಂದೆ ಜಮೀನ್ದಾರರ ಬಳಿಯಲ್ಲಿ ಕಂದಾಯ ಅಧಿಕಾರಿಗಳಾಗಿದ್ದರು. ಇವರ ಪ್ರಾರಂಭಿಕ ಶಿಕ್ಷಣ ತಿರುತ್ತಣಿ ಮತ್ತು ತಿರುಪತಿಗಳಲ್ಲಿ ನಡೆಯಿತು. ಹೈಸ್ಕೂಲು ಶಿಕ್ಷಣ ವೆಲ್ಲೋರಿನಲ್ಲಿ ನಡೆದರೆ ಮುಂದೆ ಮದ್ರಾಸಿನಲ್ಲಿ ಪದವಿ ಶಿಕ್ಷಣ ಪಡೆದರು. ಭಾರತೀಯ ಧರ್ಮಗಳು ಮತ್ತು ತತ್ವಶಾಸ್ತ್ರದ ಮೇಲೆ ಇವರು ಸ್ನಾತಕೋತ್ತರ ಪದವಿ ಪಡೆದರು. ಶಿಕ್ಷಣವನ್ನು ಮನುಷ್ಯನಿಂದ ಮನುಷ್ಯನಿಗೆ ಹಂಚಬೇಕು ಎಂಬ ಉನ್ನತ ಧ್ಯೇಯೋದ್ದೇಶಗಳನ್ನು ಹೊಂದಿದ್ದ ಇವರು ತಮ್ಮ ಉದ್ದೇಶವನ್ನು ನೆರವೇರಿಸಲು ಬನಾರಸ ಹಿಂದೂ ವಿಶ್ವವಿದ್ಯಾಲಯ, ಮೈಸೂರಿನ ಮಾನಸ ಗಂಗೋತ್ರಿ ವಿಶ್ವವಿದ್ಯಾಲಂಯಂಗಳಲ್ಲಿ ಕಾರ್ಯನಿರ್ವಹಿಸಿದರು. ಇನ್ನಿತರ ತರಗತಿಗಳ ಮಕ್ಕಳು ಕೂಡ ಬಂದು ತತ್ವಶಾಸ್ತ್ರದ ಕುರಿತು ಇವರ ವಾಗ್ಝರಿಯನ್ನು ಕೇಳುತ್ತಿದ್ದರು. ಮಕ್ಕಳಲ್ಲಿ ಶಿಕ್ಷಣದ, ಶಿಕ್ಷಕರ ಕುರಿತು, ಕುತೂಹಲ ಹುಟ್ಟಿಸಬೇಕಾದ ಕುರಿತು, ಭಾರತೀಯ ತತ್ವ ಮೀಮಾಂಸೆಯನ್ನು ಧರ್ಮಗಳ ಕುರಿತು ಇವರು ಅಪಾರಜ್ಞಾನವನ್ನು ಹೊಂದಿದ್ದರು. ಜೊತೆ ಜೊತೆಗೆ ರಾಜಕೀಯ ಜ್ಞಾನ ಕೂಡ ಹೊಂದಿದ್ದರು. ಅವರ ಪಾಂಡಿತ್ಯದ ಕುರಿತು ಅಲ್ಲಲ್ಲಿ ಚರ್ಚೆಗಳು ನಡೆಯುತ್ತಿತ್ತು. 1939 ರಿಂದ 1942ರ ವರೆಗೆ ಇವರು ಸೋವಿಯತ್ ಒಕ್ಕೂಟದ ಬ್ರಾಂಡ್ ಅಂಬಾಸಿಡರ್ ಆಗಿ ಕೂಡ ಕಾರ್ಯನಿರ್ವಹಿಸಿದರು. 1939 ರಿಂದ 1948 ರವರೆಗೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿ ಕಾರ್ಯನಿರ್ವಹಿಸಿದರು. ಜೊತೆ ಜೊತೆಗೆ ಆಂಧ್ರಪ್ರದೇಶನ ವಾಲ್ತೇರ್ ವಿಶ್ವವಿದ್ಯಾಲಯದಲ್ಲಿಯೂ ಅವರು ಕಾರ್ಯನಿರ್ವಹಿಸಿದರು. ಮುಂದೆ ಮೈಸೂರಿನ ಮಾನಸಗಂಗೋತ್ರಿಯಲ್ಲಿ 1952ರವರೆಗೆ ಇವರು ಉಪಕುಲಪತಿಗಳಾಗಿ ಕಾರ್ಯನಿರ್ವಹಿಸಿದರು. ಹೀಗೆ ವಿಶ್ವವಿದ್ಯಾಲಯಗಳಲ್ಲಿ ಇವರು ಕಾರ್ಯ ನಿರ್ವಹಿಸುತ್ತಿರುವಾಗಲೇ ಇವರಿಗೆ ಭಾರತದ ಉಪರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಲು ಕರೆ ನೀಡಲಾಯಿತು. ಹಾಗೆ ಕರೆ ಬಂದಾಗಲೇ ಮೇಲೆ ಹೇಳಿದ ಘಟನೆ ನಡೆಯಿತು.


ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ನ ಭೂತೋನ ಭವಿಷ್ಯತಿ ಎಂಬಂತೆ ಡಾಕ್ಟರ್ ಎಸ್. ರಾಧಾಕೃಷ್ಣನ್ ಅವರನ್ನು ಅವರ ಶಿಷ್ಯರು ಮತ್ತು ಸಹೋದ್ಯೋಗಿಗಳು ದೇಶದ ಅತ್ಯುನ್ನತ ಹುದ್ದೆಯೊಂದಕ್ಕೆ ಕಳುಹಿಸಿ ಕೊಟ್ಟರು. 1952 ರಿಂದ 1962 ರವರೆಗೆ ದೇಶದ ಅತ್ಯುನ್ನತ ಹುದ್ದೆಯಾದ ಉಪರಾಷ್ಟ್ರಪತಿ ಹುದ್ದೆಯನ್ನು ನಿರ್ವಹಿಸಿದ ಅವರು 1962ರಿಂದ 1967 ರವರೆಗೆ ಭಾರತ ದೇಶದ ರಾಷ್ಟ್ರಪತಿ ಹುದ್ದೆಯನ್ನು ನಿರ್ವಹಿಸಿದರು. ಓರ್ವ ಶಿಕ್ಷಕನಿಗೆ ದೊರೆತ ಅತ್ಯುನ್ನತ ಪದವಿ ಇದಾಗಿದೆ. ಬುದ್ಧಿವಂತಿಕೆ, ಚಾಣಾಕ್ಷತೆ, ಸಮಯ ಪ್ರಜ್ಞೆ ಮತ್ತು ಅಪಾರಜ್ಞಾನ ಸಂಪತ್ತಿನಿಂದ ತುಂಬಿ ತುಳುಕುತ್ತಿದ್ದ ಡಾಕ್ಟರ್ ರಾಧಾಕೃಷ್ಣನ್ ಅವರನ್ನು ಅವರ ಜನ್ಮದಿನ ಆಚರಿಸಲು ಕೇಳಿಕೊಂಡಾಗ ತಮ್ಮ ಶಿಕ್ಷಕ ಹುದ್ದೆಯನ್ನು ಸ್ಮರಿಸಿದ ಅವರು ತಮ್ಮ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲು ಕೇಳಿಕೊಂಡರು. ಅದರ ಪರಿಣಾಮವೇ ಇಂದಿನ ಈ ಶಿಕ್ಷಕರ ದಿನಾಚರಣೆ.

ಶಿಕ್ಷಕ ಎಂದರೆ ಯಾರು... ಬುದ್ಧಿ ಹೇಳಿದಾತನೇ, ವಿದ್ಯೆ ಕಲಿಸಿದವನೇ, ತಿದ್ದಿ ತೀಡಿ ವ್ಯಕ್ತಿತ್ವವನ್ನು ರೂಪುಗೊಳಿಸಿದವನೇ .
ಮೂವರು ಹೌದು.

ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ

ನಮಗೆಲ್ಲ ಮೇಲಿನ ಶ್ಲೋಕ ನೆನಪಿದೆ ಆದರೆ ಆಳವಾಗಿ ನೋಡಿದಾಗ ಗುರು ಬ್ರಹ್ಮ.. ಬ್ರಹ್ಮ ಎಂದರೆ ಸೃಷ್ಟಿಕರ್ತ, ಗುರು ವಿಷ್ಣು ಅಂದರೆ ಸ್ಥಿತಿ ಕರ್ತ, ಗುರುದೇವೋ ಮಹೇಶ್ವರ ಎಂದರೆ ಲಯ ಕರ್ತನಾದ ಮಹಾದೇವ ಮತ್ತು ಗುರು ಸಾಕ್ಷಾತ್ ಆ ಪರ ಬ್ರಹ್ಮನೇ ಹೌದು ಎಂಬ ಅರ್ಥವನ್ನು ಮೇಲಿನ ಶ್ಲೋಕ ಹೊಂದಿದ್ದರು ಅಂದರೆ ಗುರು ನಮ್ಮಲ್ಲಿ ಈ ಮೂರು ಕೆಲಸಗಳನ್ನು ಮಾಡುತ್ತಾನೆ. ಶ್ಲೋಕದ ಮುಂದಿನ ಭಾಗವನ್ನು ನೋಡಿ

**ಅಖಂಡಮಂಡಲಾಕಾರಂ**
**ವ್ಯಾಪ್ತಂ ಏನ ಚರಾಚರಂ**
**ತತ್ವದಂ ದರ್ಶಿತಂ ಏನ**
**ತಸ್ಮೈ ಶ್ರೀ ಗುರುವೇ ನಮಃ**
**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯ**
**ಚಕ್ಷುರಂ ಮೀಲಿತಂ ಏನ**
**ತಸ್ಮೈ ಶ್ರೀ ಗುರುವೇ ನಮಃ**

ಗುರುವಿನ ಅರಿವಿಗೆ ನಿಲುಕದ ಯಾವುದೇ ವಸ್ತುವಿಲ್ಲ. ಈ ಅಖಂಡ ಬ್ರಹ್ಮಾಂಡ ಮಂಡಲದ ಪ್ರತಿಯೊಂದು ವ್ಯಾಪ್ತಿಯು, ಪ್ರತಿಯೊಂದು ಚರಾಚರ ಜೀವಿಗಳು ಗುರುವಿನ ದೃಷ್ಟಿಯಿಂದ ಹೊರತಲ್ಲ. ಎಲ್ಲೆಲ್ಲೂ ಅಜ್ಞಾನದ ಕತ್ತಲೆ ತುಂಬಿದಾಗ ಜ್ಞಾನದ ಸ್ಪಟಿಕದ ದೀಪಜ್ಯೋತಿಯನ್ನು ಹಿಡಿದು ಬಂದಾತನೆ ಗುರು ಎಂದು ಶ್ಲೋಕ ಮುಂದುವರೆಯುತ್ತದೆ. ಹೀಗೆ ಗುರುವಿನ ಮಹಿಮೆಯನ್ನ ನಮ್ಮ ಹಿರಿಯರು ಹಾಡಿ ಹೊಗಳಿದ್ದಾರೆ. ಓರ್ವ ವೈದ್ಯ ತಪ್ಪು ಮಾಡಿದರೆ ಒಬ್ಬ ರೋಗಿ ತನ್ನ ಜೀವವನ್ನ ಕಳೆದುಕೊಳ್ಳಬಹುದು. ಒಬ್ಬ ಇಂಜಿನಿಯರ್ ತಪ್ಪು ಮಾಡಿದರೆ ಹಲವಾರು ಜನ ದಾರಿ ತಪ್ಪಬಹುದು. ಓರ್ವ ಶಿಕ್ಷಕ ತನ್ನ ಮೌಲ್ಯಗಳನ್ನು ಬಿಟ್ಟುಕೊಟ್ಟು ನಡೆದರೆ ಒಂದಿಡಿ ಜನಾಂಗವೇ ಹಾದಿ ತಪ್ಪಬಹುದು. ಶಿಕ್ಷಕನ ಮೇಲೆ ಅತ್ಯಂತ ಹೆಚ್ಚಿನ ಜವಾಬ್ದಾರಿ ಇದೆ. ಹಾಗೂ ಆ ಜವಾಬ್ದಾರಿಯನ್ನು ಹೊರುವ ಗಟ್ಟಿತನವು ಆತನಲ್ಲಿ ಇರುತ್ತದೆ.

ಓರ್ವ ಶಿಕ್ಷಕ ನಮ್ಮೆಲ್ಲಾ ಪರಂಪರೆಗಳ ಸಾರವನ್ನು ಅರಿತವ, ಅವುಗಳ ಒಳಿತು ಕೆಡುಕುಗಳನ್ನ ತಿಳಿದವ, ಹಂಸಕ್ಷಿರ ನ್ಯಾಯದಂತೆ ಒಳ್ಳೆಯದನ್ನು ಮಾತ್ರ ತೆಗೆದುಕೊಂಡು ಕೆಟ್ಟದ್ದನ್ನು ತೆಗೆದುಹಾಕುವವ, ಪ್ರೀತಿಯಿಂದ ತಿಳಿ ಹೇಳುವ, ಸಮಯ ಬಂದರೆ ತಿದ್ದಿ ಬುದ್ಧಿ ಹೇಳುವ ತಂದೆ ತಾಯಿಯರ ನಂತರದ ಸ್ಥಾನದಲ್ಲಿರುವ ವ್ಯಕ್ತಿ ಗುರು. ಗು ಎಂದರೆ ಕತ್ತಲು, ರು ಅಂದರೆ ಕಳೆಯುವವ. ಹೀಗೆ ನಮ್ಮ ಬದುಕಿನ ಕತ್ತಲು ಕಳೆಯುವ ಏಕೈಕ ವ್ಯಕ್ತಿ ಗುರು. ಇದು ಶಿಕ್ಷಕನ ಕುರಿತಾದ ಧನಾತ್ಮಕ ವಿಷಯವಾದರೆ.... ಮನುಷ್ಯನಾಗಿ ಆತ ತನ್ನೆಲ್ಲ ನೋವು ದುಃಖ ಸಂಕಟಗಳನ್ನು ಮರೆತು, ಅರಿತೋ ಅರಿಯದೆಯೋ ಯಾವುದೇ ತಪ್ಪುಗಳನ್ನು ಮಾಡದ ಸ್ಥಾನದಲ್ಲಿರುವಾತ. ಹೇಳುವುದು ಶಾಸ್ತ್ರ ತಿನ್ನುವುದು ಬದನೆಕಾಯಿ ಎಂಬಂತಾಗಬಾರದು ಎಂಬುದು ಗುರುವಿನ ವಿಷಯದಲ್ಲಿ ಸರ್ವ



ವಿದಿತ. ಹೇಳಿದ್ದನ್ನು ಮಾಡಿ ತೋರಿಸುವಾತ ಗುರು, ನುಡಿದಂತೆ ನಡೆಯುವವನು ಗುರು, ವೈಯುಕ್ತಿಕವಾಗಿ ತಾನೆಷ್ಟೇ ಘಾಸಿಕೊಂಡರು ಸಾರ್ವಜನಿಕವಾಗಿ ತನ್ನ ನೋವು, ದುಃಖ–ದುಮಾನಗಳನ್ನು, ವ್ಯಸನಗಳ ಮೂಲಕ ಹೊರಹಾಕಲಾರದವನು ಗುರು.

ಗುರು ಎಂದೊಡನೆ ನನಗೆ ಇನ್ನೋರ್ವ ವ್ಯಕ್ತಿ ನೆನಪಾಗುತ್ತಾರೆ ಅವರೇ ಗುರು ದ್ರೋಣಾಚಾರ್ಯರು. ಕೌರವ ಪಾಂಡವರ ಕುಲಗುರು ದ್ರೋಣಾಚಾರ್ಯರು. ದ್ರೋಣಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಬಿಲ್ಲು ವಿದ್ಯೆಯನ್ನು ಅತ್ಯಂತ ನಿಖರವಾಗಿ ಕಲಿತ ಏಕಲವ್ಯನ ಕೈಯಿಂದ ಆತನ ಹೆಬ್ಬೆರಳನ್ನೇ ಗುರುದಕ್ಷಿಣೆಯಾಗಿ ಕೇಳಿದ ನಿಷ್ಠುರ ವ್ಯಕ್ತಿ ದ್ರೋಣಾಚಾರ್ಯರು. ಗೊತ್ತಿದ್ದೋ ಗೊತ್ತಿಲ್ಲದೆಯೋ ನಾವು ಹಲವು ಬಾರಿ ಈ ವಿಷಯಕ್ಕೆ ದ್ರೋಣಾಚಾರ್ಯರನ್ನು ಹಳೆಯುತ್ತೇವೆ. ಆದರೆ ಗುರುವಿನಲ್ಲಿ ದೂರ ದೃಷ್ಟಿಯು ಮುಖ್ಯ ಎಂಬುದಕ್ಕೆ ದ್ರೋಣಾಚಾರ್ಯರೇ ಸಾಕ್ಷಿ. ಏಕಲವ್ಯ ಎಷ್ಟೇ ಆದರೂ ಮುಂದೆ ಕೌರವರ ಜೊತೆ ಸೇರಿ ಪಾಂಡವರನ್ನು ನಾಶ ಮಾಡುವ ಎಂಬ ದೂರ ದೃಷ್ಟಿಯನ್ನು ಹೊಂದಿದ ಗುರು ದ್ರೋಣಾಚಾರ್ಯರು ಬಿಲ್ಲು ವಿದ್ಯೆಗೆ ಅತ್ಯಂತ ಅವಶ್ಯಕವಾದ ಆತನ ಬಲಗೈ ಹೆಬ್ಬೆರಳನ್ನು ದಾನವಾಗಿ ಕೇಳಿ ಆತನನ್ನು ಕೊಂಚಮಟ್ಟಿಗೆ ನಿಷ್ಕ್ರಿಯಗೊಳಿಸಿದರು. ಹೀಗೆ ಮಾಡುವುದರ ಮೂಲಕ ಅವರು ಧರ್ಮವನ್ನು ಜಯಿಸಿದರು.

ಕರ್ಮಣ್ಯ ವಾದಿಕಾರಸ್ತೆ ಮಾಫಲೇಶು ಕದಾಚನ ಅಂದರೆ ಕರ್ಮವನ್ನು ನೀನು ಮಾಡು ಫಲಾಫಲ ಭಗವಂತ ನೋಡಿಕೊಳ್ಳುತ್ತಾನೆ ಎಂಬ ರೀತಿಯಲ್ಲಿ ದ್ರೋಣಾಚಾರ್ಯರು ನಡೆದರು. ಅಂತೆಯೇ ಗುರುಕುಲಕ್ಕೆ ಆದರ್ಶವಾದರು. ಸ್ವಾಮಿ ಪರಮಹಂಸ, ಶಾರದಾದೇವಿ, ಸ್ವಾಮಿ ವಿವೇಕಾನಂದ, ಸ್ವಾಮಿ ಶ್ರದ್ಧಾನಂದ, ಸ್ವಾಮಿ ಶಿವಾನಂದ ಹೀಗೆ ಆಧ್ಯಾತ್ಮ ಗುರುಗಳ ಸಾಲು ಬರೆಯುತ್ತಾ ಹೋದರೆ ಪುಟಗಳೇ ಸಾಲದು.

ಈ ಗುರುಗಳ ಮಾಲಿಕೆಯಲ್ಲಿ ಅತ್ಯಂತ ಹೆಚ್ಚಿನ ಮಹತ್ವವಿರುವುದು ನಮ್ಮ ಶರಣ ಪರಂಪರೆಯ ಜಗದ್ಗುರು ಅಣ್ಣ ಬಸವಣ್ಣ. ಕಾಯಕವೇ ಕೈಲಾಸ, ಅರಿವೇ ಗುರು, ಲಿಂಗ ಮಧ್ಯೆ ಜಗತ್ ಸರ್ವಂ ಎಂದು ಜಗತ್ತಿಗೆ ಸಾರಿದ ಮನುಜ ಕುಲ ಜಗತ್ತಿಗೆ ಒಂದೇ ನಾವೆಲ್ಲರೂ ವಿಶ್ವಮಾನವರು ಎಂದು ಸಮಾನತೆಯ ಬೀಜ ಬಿತ್ತಿದ ಸೌಹಾರ್ದತೆಯ ಹರಿಕಾರನಾದ ಮಹಾನ್ ಗುರು, ಜಗದ ಕಣ್ಣು, ಜಗಜ್ಯೋತಿ, ಅರಿವಿನ ಪರಂಜೋತಿ ಅಣ್ಣ ಬಸವಣ್ಣ.

ದೇಶವನ್ನು ಬಾಹ್ಯವಾಗಿ ಸುಭದ್ರ ಗೊಳಿಸುವ ಹೊಣೆಗಾರಿಕೆ ಯೋಧರದಾದರೆ ದೇಶದ ಜನರ ಹೊಟ್ಟೆಪಾಡನ್ನು ನೋಡಿಕೊಳ್ಳುವ ಪುಣ್ಯದ ಕೆಲಸ ರೈತರದು ಅಂತೆಯೇ ಕಲ್ಯಾಣಕರ ಸಮಾಜ ಒಂದನ್ನು ರೂಪಿಸುವ ಹೊಣೆಗಾರಿಕೆ ಶಿಕ್ಷಕರದು. ಶಿಕ್ಷಕರ ವೃತ್ತಿ, ಪ್ರವೃತ್ತಿ, ಆಯ್ಕೆ ಅವಕಾಶ, ವೃತ್ತಿಗೂ ಮಿಗಿಲಾಗಿ ಪ್ರವೃತ್ತಿಯಾಗಿ ವೃತ್ತಿಯನ್ನು ಸ್ವೀಕರಿಸಿದರೆ ಆ ವೃತ್ತಿಗೆ ಸಿಗುವ ಗೌರವ ಅತ್ಯಂತ ಹಿರಿದಾದದು. ನಮ್ಮಲ್ಲಿ ಆಚಾರ್ಯರಿಗೆ ಪ್ರಮುಖ ಸ್ಥಾನವಿದೆ ಆಚಾರ್ಯ, ಗುರು ಎಂದರೆ ಬುದ್ಧಿ ಮನಸ್ಸಿನ ಅಜ್ಞಾನ ತೊರೆದು ಜ್ಞಾನವನ್ನು ಬೆಳಗಿಸಿ ವಿವೇಕವನ್ನು ಮೈಗೂಡಿಸಿಕೊಳ್ಳುವಂತೆ ಮಾಡುವ ಅಪೂರ್ವ ವ್ಯಕ್ತಿ. ಆ ಅಪೂರ್ವ ಶಕ್ತಿಯೇ ಉತ್ತಮ ಸಮಾಜದ ಪರಮ ಆಸ್ತಿ. ಪುರಾತನ ಕಾಲದಿಂದಲೂ ಇಂದಿನವರೆಗೂ ಶಿಕ್ಷಣಕ್ಕೆ ಶಿಕ್ಷಕರಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಬದಲಾದ ಪರಿಸ್ಥಿತಿಯಲ್ಲಿ ಶಿಕ್ಷಕರು ಎದುರಿಸಬೇಕಾದ ಹಲವಾರು ಸಮಸ್ಯೆಗಳಿವೆ. ಶಿಕ್ಷಕ ಸಮಾಜದ ಬೇರಿದ್ದಂತೆ. ಯಾವತ್ತಿಗೂ ಆರೋಗ್ಯಕರವಾಗಿ ನಲಿಯುತ್ತಿರಬೇಕು ಅಂತೆಯೇ ಗಿಡ ಯಾವಾಗಲೂ ಸುರಕ್ಷಿತವಾಗಿರುತ್ತದೆ ಹೂವು ಹಣ್ಣು ಕಾಯಿಗಳಿಂದ ತುಂಬಿ ತುಳುಕುತ್ತಿರುತ್ತದೆ.

ಹಿಂದಿನ ಕಾಲದಲ್ಲಿ ವಿದ್ಯಾರ್ಥಿನೋ ನಾ ಸುಖಿನೋ ಭವಂತಿ ಎಂಬ ಮಾತಿತ್ತು ಅಂದರೆ ಎಲ್ಲಾ ಸುಖಗಳನ್ನು ತ್ಯಜಿಸಿ ವಿದ್ಯಾರ್ಥಿ ಆಗಬೇಕು ಅಥವಾ ವಿದ್ಯಾರ್ಥಿ ಇದ್ದಡೆ ಸುಖದ ಮಾತು ಇರಬಾರದು.... ಗುರುಕುಲದ ಕಾಲದಲ್ಲಿ ರಾಜ ಮಹಾರಾಜರು ಕೂಡ ತಮ್ಮ ಮಕ್ಕಳನ್ನು ಗುರುಕುಲದ ಕಠಿಣ ಶಿಕ್ಷಣಕ್ಕೆ ಕಳುಹಿಸಿಕೊಡುತ್ತಿದ್ದರು. ಆದರೆ ಇಂದು ಕಾಲ ಬದಲಾಗಿದೆ ಸರಸ್ವತಿಯನ್ನು ಲಕ್ಷ್ಮಿಯು ಕಟ್ಟಿ ಹಾಕುತ್ತಿದ್ದಾಳೆ ಎಂಬಂತೆ ವಿದ್ಯಾರ್ಜನೆ ಎಂಬುದು ದುಡ್ಡುಕೊಟ್ಟುಕೊಂಡುಕೊಳ್ಳುವಂತಹ ಪರಿಸ್ಥಿತಿ ಉಂಟಾಗಿದೆ. ಇದು ಸಲ್ಲದು. ವಿದ್ಯಾರ್ಥಿಗಳನ್ನು ಯಾವ ರೀತಿ ಒಲಿಸಿಕೊಳ್ಳಬೇಕು ಎಂದು ಕೇಳಿದರೆ ಹೆಚ್ಚೇನು ಬೇಕಾಗಿಲ್ಲ ಮಕ್ಕಳ ಮನಸ್ಸನ್ನು ಮೊದಲು ಗೆಲ್ಲಬೇಕು, ಅವರ ಇಷ್ಟ ಕಷ್ಟಗಳನ್ನು ಚರ್ಚಿಸಿ ಅವರವರಿಗೆ ಅನುಗುಣವಾಗಿ ಉಣ ಬಡಿಸಬೇಕು, ಕಲಿಸಬೇಕು.

ಶಿಕ್ಷಕನ ಮುಂದಿರುವ ಸವಾಲು ಮಕ್ಕಳಲ್ಲಿ ಅರಿವು ಮೂಡಿಸುವುದು ನಮ್ಮ ಹುಟ್ಟು, ಬದುಕು, ಜ್ಞಾನಾರ್ಜನೆಯ ಮೂಲ ಉದ್ದೇಶವಾದರೆ ಮಕ್ಕಳನ್ನು ದೃಶ್ಯ, ಶ್ರವಣ ಮತ್ತು ಕ್ರಿಯಾ ಚಟುವಟಿಕೆಗಳ ಮೂಲಕ ಜ್ಞಾನಾರ್ಜನೆಯತ್ತ ಕೊಂಡೊಯ್ಯುವುದು ಶಿಕ್ಷಕರ ಮುಂದಿರುವ ಮಹತ್ವದ ಸವಾಲು.

ಜೀವಂತ ಕಂದಮ್ಮಗಳಿಗೆ, ಚೈತನ್ಯದ ಚಿಲುಮೆಗಳಿಗೆ ಭಾವನಾ ಲೋಕವಿದೆ, ಕುತೂಹಲವಿದೆ, ನಮ್ಮ ಸಮಾಜದ ಮುಂದಿನ ನಾಗರಿಕರಾಗುವವರ ಭವಿಷ್ಯ ನಮ್ಮ ಕೈಯಲ್ಲಿದೆ. ಅವರೇ ನಮ್ಮ ಸಂಪತ್ತು ಅವರಿಗೆ ಶ್ರೇಷ್ಠವಾದ ಆರೋಗ್ಯಕರವಾದ ಸವಾಲುಗಳ ಮೂಲಕ ಒಳ್ಳೆಯದನ್ನು ಕಲಿಸುವ ಒಳ್ಳೆಯದನ್ನು ನೀಡುವ ಕೆಟ್ಟದ್ದನ್ನು ದೂರಿಕರಿಸುವ ನಿಲುವು ಹೊಂದಿರುವ ಉತ್ತಮ ಶಿಕ್ಷಕರ ದೊಡ್ಡಪಡೆಯೇ ತಯಾರಾಗಬೇಕು. ಆದರೆ ಅವರಿಗೆ ಶೈಕ್ಷಣಿಕ, ಪಠ್ಯ ಮತ್ತು ಪಠ್ಯೇತರ ವಿಷಯಗಳನ್ನು ಹೊರತುಪಡಿಸಿ ಇನ್ನುಳಿದ ಯಾವುದೇ ರೀತಿಯ ಬಾಹ್ಯ ಚಟುವಟಿಕೆಗಳಿಗೆ, ರಾಜಕೀಯ ಗೊಂದಲಗಳಿಗೆ ನೂಕಬಾರದು. ಈ ರೀತಿ ಗೊಂದಲಗಳಿಗೆ ಒಳಗಾದ ಶಿಕ್ಷಕ ಮಕ್ಕಳಿಗೆ ಕಲಿಸುವ ಸಾಧ್ಯತೆ ಬಹಳ ಕಡಿಮೆ. ಮಕ್ಕಳ ಮನಸ್ಸು ಮೃದುವಾದ ಹಸಿ ಜೇಡಿ ಮಣ್ಣಿನಂತೆ. ನೀವು ನೀಡುವ ಆಕಾರ ಕೊನೆಯವರೆಗೂ ಮಗುವಿನಲ್ಲಿ ಉಳಿದು ಹೋಗುವುದು ಸಣ್ಣ ಕೆಲಸವನ್ನು ಆಟದಂತೆ ಮಾರ್ಪಡಿಸಿ ಒಳ್ಳೆಯ ತಂತ್ರವನ್ನು ಅದರಲ್ಲಿ ತುಂಬಬೇಕು.

ಶ್ರೀ ಗುರುವಂ ನೆನೆಯಲ್ಕೆಡಹ ಜಾಗದು ಕಂಡಡೆ ಭವಗ್ಗಳೋಡಗು ಮತ್ತ ರಾಗದಿ ಚರಣಾಶ್ರಯ ಕೊಂಡಾಗಲೇ ಇಹಪರಕೆ ಸೌಖ್ಯ ಚೂಡಾರತ್ನ ಅಂದರೆ ಶ್ರೀ ಗುರುವನ್ನು ನೆನೆದರೆ ವಿಪತ್ತು ಬಾರದು, ಗುರುವನ್ನು ನೋಡಿದರೆ ಭವಗಳು ತೊಲಗುವವು, ಪಾದದಲ್ಲಿ ಶರಣಾದರೆ ಸುಖವಾಗುವುದು ಎಂಬ ಡಾ. ಟಿ.ವಿ ವೆಂಕಟಚಲ ಶಾಸ್ತ್ರಿಗಳ ನುಡಿಯಂತೆ, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಅರಿವನ್ನು ಹೊಂದಿ ಗುರುಗಳನ್ನು ಗೌರವಿಸುವ ಈ ದಿನ ಎಲ್ಲಾ ಶಿಕ್ಷಕರಿಗೂ ಶಿಕ್ಷಕರ ದಿನಾಚರಣೆಯ ಶುಭಾಶಯಗಳು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055